Mr. SPEAKER.—The Hon'ble Minister for Education sought my permission and I allowed him to have his say. I found that in four papers four slightly varying versions have appeared. He is perfectly right and the convention and the rule and the knowledge that Sri Muckannappa possesses has not enlightened him, I do not know how to enlighten him. (laughter)

DISCUSSION ON A MATTER OF URGENT PUBLIC IMPORTANCE.

Re : Strike by the College Students.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ತಾವು ಹೇಳಿದ ಹಾಗೆ ನಾನು ಈಗ ನಮ್ಮ ರೂಲ್ಸ್ ಆಫ್ ಪ್ರೊಸೀಜರ್‌ನ 59ನೆಯ ವಿಧಿಯ ಪ್ರಕಾರ ಈಗ ಒಂದು ಬಹಳ ಪ್ರಾಮುಖ್ಯವಾದ ಹಾಗೂ ನಮ್ಮ ದೇಶದ ಮುಂದಿರತಕ್ಕ ಅತಿ ತ್ವರಿತವಾದ ಮತ್ತು ಪ್ರಾಮುಖ್ಯವಾದಂಥ ವಿಚಾರವನ್ನು ನಾನೀಗ ಈ ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಅದೇನೆಂದರೆ :

ವಿದ್ಯಾ ಇಲಾಖೆಯವರು ಇತ್ತೀಚೆಗೆ ಹೊರಡಿಸಿದ ಒಂದು ಹುಕುಂ ಪ್ರಕಾರ ನಮ್ಮ ವಿಶ್ವವಿದ್ಯಾನಿಲಯದ ಆಡಳಿತದಲ್ಲಿರತಕ್ಕ ಕಾಲೇಜುಗಳಲ್ಲಿ ಇಲ್ಲಿಯವರೆಗೂ ಸರ್ಕಾರದವರು ಕೊಡುತ್ತಿದ್ದ ಫ್ರೀಷಿಪ್ಪುಗಳನ್ನು ಬಹಳ ಕಡಿಮೆ ಮಾಡಿದ್ದಾರೆ. ಹೀಗೆ ಅವನ್ನು ಖೋತಾ ಮಾಡಿರುವುದರಿಂದ ವಿಪರೀತ ತೊಂದರೆಯುಂಟಾಗಿದೆ. ಈ ಬಗ್ಗೆ ದೇಶದಲ್ಲಿ ಒಂದು ದೊಡ್ಡ ಚಳುವಳಿಯೇ ಎದ್ದಿದೆ. ಆ ಚಳುವಳಿ ಏನೆಂಬುದನ್ನು ನಾನೀಗ ಸಭೆಯ ಮುಂದೆ ಇಡುತ್ತೇನೆ.

ಸರ್ಕಾರದವರು ಏಕಾಏಕೀ ಕಾಲೇಜುಗಳಲ್ಲಿ ಫ್ರೀಷಿಪ್ಪುಗಳನ್ನು ಕಡಿಮೆ ಮಾಡಿದ್ದಾರೆ. ಈ ವಿಚಾರಕ್ಕೆ ನಾನೀಗ ಸರ್ಕಾರದವರ ಗಮನವನ್ನು ಸೆಳೆಯಬೇಕಾಗಿದೆ. ಈ ಹಿಂದೆ ವಿದ್ಯಾ ಮಂತ್ರಿಗಳು ಈ ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ಆಗ ಅವರು ಒಂದು ವಾದವನ್ನು ಈ ಸಭೆಯ ಮುಂದಿಟ್ಟರು. ಅವರಿಟ್ಟ ವಾದದ ತಿರುಳಿಷ್ಟು : ನಮ್ಮ ಕಾಲೇಜುಗಳಲ್ಲಿ ಫ್ರೀಷಿಪ್ಪುಗಳ ಮಟ್ಟ ಯಾವ ಮಟ್ಟದಲ್ಲಿರಬೇಕೆಂಬ ವಿಚಾರವನ್ನು ನಿರ್ಧರಿಸುವಾಗ ಈ ಫೀ ಮಟ್ಟವನ್ನು ಒಂದು ಏಕರೂಪತೆಗೆತರಲು ಇಲ್ಲಿರತಕ್ಕ ಕಾಲೇಜು ಫೀಜನ್ನು ಏರಿಸಬೇಕಾಯಿತು. ಆದುದರಿಂದ ಇಲ್ಲಿ ಕಾಲೇಜುಗಳಲ್ಲಿ ಫ್ರೀ ಷಿಪ್ಪುಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕಾಯಿತು ಎಂದು ಹೇಳಿದರು. ಅವರು ಈ ಒಂದು ವಾದವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈ ಹಿಂದೆ ನಮ್ಮ ದೇಶದಲ್ಲಿ ವಿಶ್ವವಿದ್ಯಾನಿಲಯದ ಆಡಳಿತದಲ್ಲಿರತಕ್ಕ ಕಾಲೇಜುಗಳಲ್ಲಿ 100 ಜನ ವಿದ್ಯಾರ್ಥಿಗಳಲ್ಲಿ 33 ಜನರಿಗೆ ಫ್ರೀಷಿಪ್ಪುಗಳನ್ನು ಕೊಡಲಾಗುತ್ತಿತ್ತು. ಹೆಣ್ಣು ಮಕ್ಕಳಿಗೆ 100ಕ್ಕೆ 50 ಮಂದಿಗೆ ಫ್ರೀ ಷಿಪ್ಪನ್ನು ಕೊಡುತ್ತಿದ್ದರು. ಈಗ ಅದನ್ನು ಏಕಾಏಕಿ ಕಡಿಮೆ ಮಾಡಿ 30 ಇದ್ದುದನ್ನು 15ಕ್ಕೆ ಇಳಿಸಿದ್ದಾರೆ. 50 ಇದ್ದುದನ್ನು 20 ಕ್ಕೆ ಇಳಿಸಿದ್ದಾರೆ. ಹೀಗೆ ಒಂದೇ ಏಟಿಗೆ ಶೇಕಡ 60 ರಷ್ಟನ್ನು ಕಡಮೆ ಮಾಡಿದ್ದಾರೆ. ಇದರ ಜೊತೆಗೆ ಈ ಸ್ಕಾಲರ್‌ಷಿಪ್ಪು ಬಂದರೆ ಅದರ ಜೊತೆಗೆ ಫ್ರೀಷಿಪ್ಪು ಕೂಡ ಹೋಗುತ್ತಿತ್ತು. ಆದರೆ ಈಗ ಏನಾಗುತ್ತದೆ ಎಂದರೆ ಸ್ಕಾಲರ್‌ಷಿಪ್ಪು ಪಡೆದಂತಹ ವಿದ್ಯಾರ್ಥಿಗಳಿಗೆ ಫ್ರೀಷಿಪ್ಪು ಇರುವುದಿಲ್ಲ. ಇದರಲ್ಲಿ ಸುಮಾರು ಹತ್ತು ಪರ್ಸೆಂಟಿನಷ್ಟು ಖೋತಾ ಆಗಿದೆ. ಸುಮಾರು ಅರವತ್ತು ಪರ್ಸೆಂಟಿನಷ್ಟು ಫ್ರೀಷಿಪ್ಪುಗಳು ಎಂದು ಮೈಸೂರು ಯೂನಿವರ್ಸಿಟಿಯ ಕಾಲೇಜುಗಳಲ್ಲಿ ಬಹಳ ಹಿಂದಿನ ಕಾಲದಿಂದಲೂ ಬರುತ್ತಿದ್ದುದನ್ನು ಈಗ ಕಡಿಮೆ ಮಾಡಲಾಯಿತು. ತಾವು ಹೋದ ವರ್ಷ ಇದೇ ಅಸೆಂಬ್ಲಿಯಲ್ಲಿ ಹೇಳಿಕೆ ಕೊಟ್ಟಾಗ ಈ ದೇಶದಲ್ಲಿರುವ ಎಲ್ಲಾ ಕಾಲೇಜುಗಳಲ್ಲಿನ ಫೀಸನ್ನು ಜಾಸ್ತಿ ಮಾಡಿದಿರಿ. ಸುಮಾರು ನೂರಕ್ಕೆ ನೂರರಷ್ಟು ಜಾಸ್ತಿ ಮಾಡಿದಾಗ ಎಲ್ಲ ಕಾಲೇಜುಗಳ ವಿದ್ಯಾರ್ಥಿಗಳೂ ಮುಷ್ಕರ ಹೂಡಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳನ್ನು ಹಾಗೂ ವಿದ್ಯಾ ಮಂತ್ರಿಗಳನ್ನು ಭೇಟಿ ಮಾಡಿದಾಗ ಮುಖ್ಯ ಮಂತ್ರಿಗಳು ಏನೋ ಒಂದು ರೀತಿಯ ಸಮಾಧಾನ ಹೇಳಿದರು. ಆಗ ನೀವು ಏನು ಹೇಳಿಕೆ ಕೊಟ್ಟಿರಿ ಎಂದರೆ ನಾವು ಆದಷ್ಟುಮಟ್ಟಿಗೆ ಫ್ರೀಷಿಪ್ಪು ಮತ್ತು ಸ್ಕಾಲರ್‌ಷಿಪ್ಪುಗಳನ್ನು ಜಾಸ್ತಿ ಮಾಡುತ್ತೇವೆ, ಅದರಲ್ಲೂ ಬಡವರಾದ ವಿದ್ಯಾರ್ಥಿಗಳಾದಂತಹವರಿಗೆ ಹಾಗೂ ಯೋಗ್ಯತೆಯುಳ್ಳವರಿಗೆ ಹೆಚ್ಚು ಮಾಡಿ ಕೊಡುತ್ತೇವೆಂದು ವಿದ್ಯಾ ಮಂತ್ರಿಗಳು ಈ ಸಭೆಯಲ್ಲೇ ಹೇಳಿದ್ದಾರೆ. ಮತ್ತು ಆಗ ವಿದ್ಯಾರ್ಥಿಗಳು ಏನು ಹೇಳಿದ್ದರು ಎನ್ನುವುದರ ಬಗ್ಗೆ ನನ್ನಲ್ಲಿ ವಿದ್ಯಾರ್ಥಿಗಳ ಮೆಮೊರ್ಯಾಂಡಂ ಕೂಡ ಬಂದಿದೆ. ಬೇಕಾದರೆ ಓದಿ ಹೇಳುತ್ತೇನೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳಿಗೂ ಕೊಟ್ಟಿದ್ದಾರೆ. ಅಂತಹ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದ್ದರೆ ಸ್ಕಾಲರ್‌ಷಿಪ್ಪುಗಳನ್ನೂ

(ಶ್ರೀ ಎಸ್. ಶಿವಪ್ಪ)

ಫ್ರೀಷಿಪ್ಪುಗಳನ್ನೂ ಹೆಚ್ಚು ಮಾಡಲು ಪ್ರಯತ್ನ ಮಾಡೋಣ ಎಂದು ಆಗ ವಿದ್ಯಾ ಮಂತ್ರಿಗಳೂ ಹೇಳಿದ್ದರು. ಹಾಗೆ ತೊಂದರೆಯಾಗಿರುವ ಬಡ ವಿದ್ಯಾರ್ಥಿಗಳಿಗೆ ಪರಿಹಾರ ಕೊಡಬೇಕೆಂದು ಹೇಳಿದಾಗ ಫೀಸನ್ನು ಏರಿಸುವುದರಿಂದ ಶ್ರೀಮಂತರ ಮಕ್ಕಳಿಗೆ ತೊಂದರೆಯಾಗುವುದೂ ಅಲ್ಲದೆ ಬೇರೆ ಯವರೂ ತೊಂದರೆಗೆ ಸಿಕ್ಕಿದ್ದಾರೆ ಎಂದು ಹೇಳಿದರು. ಒಟ್ಟಿನಲ್ಲಿ ನಮ್ಮ ಮೈಸೂರು ದೇಶದ ವಿದ್ಯಾರ್ಥಿಗಳ ಪರಿಸ್ಥಿತಿ ಏನಾಗಿದೆ ಎಂದರೆ ಇವೊತ್ತಿನ ಒಂದು ಜೀವನದ ವೆಚ್ಚಗಳು ಏರುತ್ತಿರುವಾಗ ತಾವು ನೂರಕ್ಕೆ 30 ಫ್ರೀಷಿಪ್ಪು ಕೊಡಬೇಕೆಂದು ಇದ್ದುದನ್ನು ನೂರಕ್ಕೆ 15 ರಷ್ಟು ಎಂದು ಇಳಿಸಿದ್ದೀರಿ. ಅದರಲ್ಲೂ ಹೆಣ್ಣು ಮಕ್ಕಳಿಗೆ ಕಾಲೇಜಿನಲ್ಲಿ ಅವರು ವಿದ್ಯಾಭ್ಯಾಸ ಮಾಡುವುದಕ್ಕೆ ಫ್ರೀಷಿಪ್ಪುಗಳು ಹಾಗೂ ಸ್ಕಾಲರ್‌ಷಿಪ್ಪುಗಳು ಸಿಗುತ್ತಿದ್ದುದರಿಂದ ಬಹಳ ಅನುಕೂಲವಾಗುತ್ತಿತ್ತು. ಈಗ ಅವನ್ನೆಲ್ಲಾ ತೆಗೆದುಹಾಕುವುದರಿಂದ ಅವರಿಗೆಲ್ಲ ಬಹಳ ತೊಂದರೆಯಾಗುತ್ತದೆ. ಅದಕ್ಕಾಗಿ ಸರಕಾರ ಹೆಣ್ಣು ಮಕ್ಕಳ ಕಡೆಗೆ ಸ್ವಲ್ಪ ಹೆಚ್ಚಿನ ಗಮನ ಕೊಡಬೇಕು. ಅವರನ್ನು ವಿದ್ಯಾಭ್ಯಾಸದಲ್ಲಿ ಉನ್ನತಮಟ್ಟಕ್ಕೆ ತರಬೇಕೆಂದು ಇದ್ದುದನ್ನು ಈಗ ನೂರಕ್ಕೆ ಐವತ್ತರಷ್ಟು ಫ್ರೀಷಿಪ್ಪು ಕೊಡುವುದರಲ್ಲಿ ಖೋತಾ ಮಾಡಲಾಗಿದೆ. ಹೀಗಾದರೆ ಅವರು ಕಾಲೇಜು ಶಿಕ್ಷಣ ಪಡೆಯುವುದಾದರೂ ಹೇಗೆ? ಬಹಳ ಹಿಂದಿನ ಕಾಲದಿಂದಲೂ ನಮ್ಮ ದೇಶದಲ್ಲಿ ನೂರಕ್ಕೆ ಐವತ್ತರಷ್ಟು ಸ್ಕಾಲರುಷಿಪ್ಪು, ಫ್ರೀಷಿಪ್ಪುಗಳನ್ನು ಕೊಡುವುದು ನಡೆದುಕೊಂಡು ಬಂದಿದೆ. ಇಂತಹುದನ್ನು ಶೇಕಡಾ 50 ರಿಂದ ಶೇಕಡಾ 20ಕ್ಕೆ ಇಳಿಸುವುದರಿಂದ ಬಹಳ ಕಷ್ಟದ ಪರಿಸ್ಥಿತಿಯನ್ನು ವಿದ್ಯಾರ್ಥಿಗಳಲ್ಲಿ ತಂದೊಡ್ಡುತ್ತಿದ್ದೀರಿ. ಕಾಲೇಜುಗಳಿಗೆ ವಿದ್ಯಾರ್ಥಿಗಳು ಸೇರುವಾಗ ಅವರುಗಳು ಹೋದ ವರ್ಷದಲ್ಲಿ ಯಾವ ರೀತಿ ಸ್ಕಾಲರ್‌ಷಿಪ್ಪುಗಳನ್ನು ಹಾಗೂ ಫ್ರೀಷಿಪ್ಪುಗಳನ್ನು ಪಡೆಯುತ್ತಿದ್ದರೋ ಅದರಂತೆ ಈ ವರ್ಷದಲ್ಲೂ ಕೂಡ ಫ್ರೀಷಿಪ್ಪುಗಳನ್ನು ಹಾಗೂ ಅರ್ಧ ಫ್ರೀಷಿಪ್ಪನ್ನು ಮುಂದವರಿಸಿಕೊಂಡು ಬರುತ್ತಾರೆಂದು ನಂಬಿಕೊಂಡಿದ್ದರು. ಅದರಂತೆ ಅವರೆಲ್ಲಾ ಕಾಲೇಜಿಗೆ ಸೇರಿ ಈಗಾಗಲೇ ಆರು ತಿಂಗಳಾಯಿತು. ಆದರೆ ಈಗ ಈ ರೀತಿ ನೀವು ಮಾಡಿದರೆ ಅಂತಹ ವಿದ್ಯಾರ್ಥಿಗಳೆಲ್ಲಾ ಅವರ ವಿದ್ಯಾಭ್ಯಾಸವನ್ನು ಮುಂದುವರಿಸುವುದಾದರೂ ಹೇಗೆ? ಇವೊತ್ತಿನ ದಿವಸ ಶೇಕಡಾ 50 ರಷ್ಟು ಫ್ರೀಷಿಪ್ಪುಗಳನ್ನು ಶೇಕಡಾ 20 ರಷ್ಟಕ್ಕೆ ಇಳಿಸುವುದರಿಂದ ಅನೇಕ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತದೆ. ಇದರಿಂದ ಅವರ ತಂದೆತಾಯಿಗಳಿಗೂ ಬಹಳ ತೊಂದರೆಯಾಗಿದೆ. ಹಿಂದೆ ಶೇಕಡ 80ರಿಂದ 90ರಷ್ಟು ಜನರು ಫ್ರೀಷಿಪ್ಪುಗಳು ಅರ್ಧ ಫ್ರೀಷಿಪ್ಪುಗಳು ಎಂದು ಪಡೆಯುತ್ತಿದ್ದ ವಿದ್ಯಾರ್ಥಿಗಳ ಅಭಿವೃದ್ಧಿಗೇ ಬಹಳ ತೊಂದರೆಯಾಗುವಂತೆ ಶೇಕಡಾ 20 ರಷ್ಟು ಎಂದೇಕೆ ಮಾಡಬೇಕು! ಅದರಲ್ಲೂ ಈಗಾಗಲೇ ಅನೇಕ ಕಡೆಗಳಲ್ಲಿ ಫ್ರೀಷಿಪ್ಪು ಹಾಗೂ ಸ್ಕಾಲರ್‌ಷಿಪ್ಪು ಕಮಿಟಿಯವರು ತೀರ್ಮಾನ ಮಾಡಿ ಕಳುಹಿಸಿದ ಮೇಲೆ ಈ ರೀತಿಯಾಗಿ ಖೋತಾ ಮಾಡಿರುವುದರಿಂದ ಇಂತಹ ಬೋರ್ಡಿನವರು ಮಾಡಿದಂತಹ ತೀರ್ಮಾನಕ್ಕೆ ಬೆಲೆಯೇನು ಬಂದಂತಾಗುತ್ತದೆ! ಅಲ್ಲದೇ ಅನೇಕ ವಿದ್ಯಾರ್ಥಿಗಳಲ್ಲಿ ಇದೇ ರೀತಿಯಾಗಿ ಫ್ರೀಷಿಪ್ಪುಗಳನ್ನು ಮುಂದುವರಿಸಿಕೊಂಡು ಬರುತ್ತಾರೆ ಎನ್ನುವ ಭಾವನೆಯಿತ್ತು. ಈಗಾಗಲೇ ಡಿಸೆಂಬರು ತಿಂಗಳು ಕಳೆದದ್ದಾಯಿತು, ಇನ್ನು ಮುಂದಿನ ವರ್ಷ ಜೂನ್ ಜುಲೈ ಎನ್ನುವ ತಿಂಗಳಲ್ಲಿ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಈಗಿನಿಂದಲೇ ವಿದ್ಯಾ ಮಂತ್ರಿಗಳು ಉಪಯೋಗಿಸಿಕೊಂಡು ಮಾಡಬೇಕು ಎಂದು ಮಾಡುತ್ತಿದ್ದಾರೋ ಏನೋ ಒಂದೂ ಗೊತ್ತಾಗುವುದಿಲ್ಲ. ಇವೊತ್ತು ಮೈಸೂರು ವಿಶ್ವವಿದ್ಯಾನಿಲಯದೊಳಗೆ ಇರುವ ಕಾಲೇಜುಗಳವರು ಇದರ ಹೊರೆ ಹೊರಬೇಕು ಎಂದು ಮಾಡುವುದು ಬಹು ತಪ್ಪು ಅಭಿಪ್ರಾಯ. ನಮ್ಮ ಮೈಸೂರು ದೇಶದಲ್ಲಿ ಅದರಲ್ಲೂ ಉತ್ತಮವಾದ ವಿದ್ಯಾ ಕ್ಷೇತ್ರದಲ್ಲಿ ಇಲ್ಲದೇ ಇರುವ ಗೊಂದಲಗಳನ್ನೆಬ್ಬಿಸಿ ಇಂತಹ ಹೇಯವಾದ ನೀತಿಯನ್ನನುಸರಿಸಲು ಏಕೆ ಹೋಗುತ್ತಿದ್ದೀರಿ? ನೀವು ವಿದ್ಯಾ ಮಂತ್ರಿಗಳಾಗಿ ಬಂದಾಗಿನಿಂದಲೂ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಂದು ದೊಡ್ಡ ಪೆಟ್ಟನ್ನು ಹಾಕುತ್ತಲೇ ಬಂದಿದ್ದೀರಿ! ಇವೊತ್ತಿನ ದಿನ ಇಂಜನೀಯರಿಂಗು ಹಾಗೂ ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ಹಂಚುವಿಕೆಯ ರೀತಿಯಲ್ಲಿ ನಿಮ್ಮದೇ ಆದ ಒಂದು ನೀತಿಯನ್ನು ಅನುಸರಿಸಿ ಎಷ್ಟೋ ವಿದ್ಯಾರ್ಥಿಗಳಿಗೆ ಸೀಟುಗಳು ಸಿಗದಂತೆ ಮಾಡಿದಿರಿ. ಇದರಲ್ಲಿ ಶ್ರೀಮಂತರುಗಳು ಕೂಡ ಒಂದು ದೊಡ್ಡ ಗೊಂದಲವನ್ನೇ ಎಬ್ಬಿಸಲು ಅವಕಾಶವಾಯಿತು. ಹೀಗೆ ನಿಮ್ಮ ಭಾವನೆ ಹಳೆಯ ಮೈಸೂರಿಗೆ ಒಂದು ರೀತಿ ಇತರ ಭಾಗಗಳಿಗೆ ಒಂದು ನೀತಿ ಎನ್ನುವಂತೆ ಎರಡು ಭಾವನೆಗಳನ್ನು ಕಲ್ಪಿಸುತ್ತಿದ್ದೀರಿ. ಉತ್ತರ ಕರ್ಣಾಟಕದ ಭಾಗದಲ್ಲಿ ಪ್ರೈಮರಿ ವಿದ್ಯಾಭ್ಯಾಸ ಕೊಡುವಾಗ ಅವರಿಗೆಲ್ಲಾ ಕೆಲವು ಕನ್‌ಸೆಷನ್ನುಗಳು ಸಿಗುತ್ತಿದ್ದುವು. ಅವನ್ನೆಲ್ಲಾ ಇತರ ಮೈಸೂರಿನ ಭಾಗಗಳಿಗೆ ಕೊಟ್ಟಿಲ್ಲ. ಆದರೆ ನಾವು ಕೊಡಬೇಡ ಎಂದು ಹೇಳುತ್ತಿಲ್ಲ. ಕನ್‌ಸೆಷನ್ನುಗಳು ಹಿಂದಿನಿಂದ ಏನಿದ್ದುವೋ ಅವನ್ನೆಲ್ಲಾ ಕೊಡಬೇಕು, ಕೊಡಿ.

Mr. SPEAKER.—We are not discussing the whole policy of the Education Department. We are dealing with the matter arising out of the strike by the University students at Bangalore.

Sri C. J. MUCKANNAPPA.—The Government is dealing with this problem with an ulterior motive.

Mr. SPEAKER.—Under that guise, anything might be mentioned here.

Sri S. SIVAPPA.—I am submitting that I am greatly interested in bringing about emotional integration. I would oppose any action which would tend to destroy or disturb integration. But in the name of uniformity, Government cannot destroy the existing system and do harm and create hardships to young children. They have entered colleges with the fond hope of getting scholarships which they were getting so far. But all of a sudden, like a thunderbolt, Government issues an order drastically reducing the number of scholarships. How can the students continue studies under such circumstances ?

ಮಾನ್ಯ ಮುಖ್ಯ ಮಂತ್ರಿಗಳು ಈ ರೀತಿ ನಗತಕ್ಕ ವಿಷಯವಲ್ಲ. ಇದು ಬಹಳ ಸಂಕಟದ ಪರಿಸ್ಥಿತಿ. ತಮಗೂ ಒಂದು ಒಳ್ಳೆಯ ರೀತಿಯಲ್ಲಿ ಚೆನ್ನಾಗಿ ಹೆಸರು ಬರಲಿ ಎಂದು ನಾನು ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ನಗುವುದೇನಲ್ಲ. ತಾವು ಕನ್ನಡದಲ್ಲಿ ಭಾಷಣವನ್ನು ಆರಂಭಿಸಿ ಇಂಗ್ಲೀಷಿನಲ್ಲಿ ಹೇಳುವುದಕ್ಕೆ ಮೊದಲು ಮಾಡಿದಿರಿ. ಅದಕ್ಕಾಗಿ ಅಷ್ಟೇ.

ಶ್ರೀ ಎಸ್. ಶಿವಪ್ಪ.—ತಾವಾದರೂ ಈ ಸಮಸ್ಯೆಯನ್ನು ಇವೊತ್ತಿನ ದಿನ ಇನ್ನೂ ವಿಚಾರ ಮಾಡಲಿಲ್ಲವಲ್ಲಾ ಎಂದು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತಿದ್ದೇನೆ. ನಿಮ್ಮ ಒಂದು ಆಡಳಿತದ ವಿದ್ಯಾ ಕ್ಷೇತ್ರದಲ್ಲಿ ಒಂದ ನಿರ್ವಿವಾದ ಕಾರ್ಯಕ್ರಮವನ್ನು ಹಾಕಿಕೊಂಡು ಅದು ಸುಗಮವಾಗಿ ನಡೆಯುವಂತಹ ವಿಚಾರಗಳನ್ನು ಕೈಗೊಳ್ಳದೆ ಎಷ್ಟೋ ವರ್ಷಗಳಿಂದ ಬಂದಿದ್ದಂತಹ ಪದ್ಧತಿಗಳನ್ನು ನುಚ್ಚು ನೂರಾಗಿ ಹೋಗುವಂತೆ ನಿಮ್ಮ ವಿದ್ಯಾಮಂತ್ರಿಗಳು ಕೈಗೊಳ್ಳುತ್ತಿರುವುದು ಸಾಧುವಾದ ವರ್ತನೆಯೇನು ? ಇಂತಹ ಅಸಾಧ್ಯವಾದ ಕಾರಣವಾದರೂ ಇಲ್ಲಿ ಏನಿತ್ತು ? ಅದರಲ್ಲೂ ವಿದ್ಯಾರ್ಥಿನಿಯರಿಗೆ ಸ್ವಲ್ಪ ರಿಯಾಯಿತಿಗಳನ್ನು ಕೊಡಬೇಕು ಹಾಗೂ ಪ್ರೈಮರಿ ಶಾಲೆಗಳಲ್ಲಿ ಮತ್ತು ಹೈಸ್ಕೂಲುಗಳಲ್ಲಿ ಉಚಿತ ವಿದ್ಯಾಭ್ಯಾಸವನ್ನು ಕೊಡಬೇಕು ಮತ್ತು ಇನ್ನೂ ಮುಂದೆ ಕಾಲೇಜು ಶಿಕ್ಷಣದವರೆಗೆ ಉಚಿತ ವಿದ್ಯಾಭ್ಯಾಸ ಕೊಡುವುದು ಸಾಧ್ಯವೇ ಎಂದು ಯೋಚನೆ ಮಾಡತಕ್ಕ ಕಾಲದಲ್ಲಿ ತಾವು ವಿವಿಧಹಂತಗಳಲ್ಲಿ ಕೊಡುತ್ತಿದ್ದಂತಹ ರಿಯಾಯತಿಗಳನ್ನೆಲ್ಲಾ ಕಡಮೆ ಮಾಡುತ್ತ ಹೋಗುವುದು ತಪ್ಪು. ಇದರಿಂದ ನಿಮಗೆ ಬರತಕ್ಕ ದುಡ್ಡೂ ಅಲ್ಪ ಎನ್ನುವುದು ನಮ್ಮ ಮುಂದೆ ಇರುವ ಅಂಕಿ ಅಂಶಗಳ ಪ್ರಕಾರ ಮತ್ತು ತಾವು ಮಾಡಿರುವ ಪಟ್ಟಿಯಂತೆ ಗೊತ್ತಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗಾಗುತ್ತಿರುವುದು ತೀವ್ರವಾದ ತೊಂದರೆಗಳು. ಆದಷ್ಟುಮಟ್ಟಿಗೆ ಫ್ರೀಷಿಪ್ಪುಗಳನ್ನು ಮತ್ತು ಸ್ಕಾಲರುಷಿಪ್ಪುಗಳನ್ನು ಕಡಮೆ ಮಾಡುವ ದೃಷ್ಟಿಯಿಂದ ಅವರ ವಿದ್ಯಾಭ್ಯಾಸಕ್ಕೆ ಎಷ್ಟು ತೊಂದರೆಯಾಗುತ್ತದೆ ಎನ್ನತಕ್ಕ ವಿಚಾರವನ್ನು ಸರಕಾರದ ಗಮನಕ್ಕೆ ತರಬೇಕು ಮತ್ತು ಆ ವಿಚಾರವನ್ನು ಈ ಸಭೆಯಮುಂದೆ ಚರ್ಚೆ ಮಾಡಬೇಕು ಎನ್ನುವ ಒಂದು ಉದ್ದೇಶದಿಂದ ಈ ವಿಷಯವನ್ನು ಇಲ್ಲಿ ತಂದಿದ್ದೇನೆ.

2-30 P.M.

ಸಭಾಪತಿಗಳ ಮೂಲಕ ಈ ಸಭೆಯ ಗಮನಕ್ಕೆ ಏನು ತರುತ್ತಿದ್ದೇನೆಂದರೆ ವಿದ್ಯಾ ಮಂತ್ರಿಗಳು ವಿದ್ಯಾ ಕ್ಷೇತ್ರದಲ್ಲಿ ಏನು ಮಾಡಬೇಕಾದರೂ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಲ್ಲ ಆಡಳಿತ ಕೆಟ್ಟು ಹೋಗಿದೆ, ಬಹಳ ಸುಧಾರಣೆಯಾಗಬೇಕಾಗಿದೆ ಎಂಬ ಅಭಿಪ್ರಾಯವನ್ನು ಅವರು ಯಾವ ಪ್ರದೇಶದಿಂದ ಬಂದಿದ್ದಾರೊ ಆ ಪ್ರದೇಶದ ದೃಷ್ಟಿಯನ್ನೆ ಇಟ್ಟುಕೊಂಡು ಹೊಂದಿದ್ದಾರೆ. ಅವರು ಬಂದಿರತಕ್ಕಂಥ ಪ್ರದೇಶದ ದೃಷ್ಟಿ ಇಟ್ಟುಕೊಂಡು ಹಳೆ ಮೈಸೂರು ಪ್ರದೇಶಕ್ಕೆ ಹೊರೆ ಹೊರಿಸಬೇಕು ಅನ್ನತಕ್ಕಂಥ ಭಾವನೆ ತಪ್ಪು. ಬಹುಶಃ ಅಲ್ಲಿ ಏನು ಒಳ್ಳೆಯದಿದೆಯೊ ಅದನ್ನು ಇಲ್ಲಿ ಅನುಕರಿಸೋಣ, ಇಲ್ಲಿ ಏನು ಒಳ್ಳೆಯದಿದೆಯೊ ಅಲ್ಲಿ ಅನುಕರಿಸಲಿ. ಅದು ಬಿಟ್ಟು ಆ ಪ್ರದೇಶದಲ್ಲಿರತಕ್ಕಂಥದೆಲ್ಲಾ ಒಳ್ಳೆಯದು, ಅದನ್ನು ಈ ಹಳೆ ಮೈಸೂರಿನ

(ಶ್ರೀ ಎಸ್. ಶಿವಪ್ಪ)

ವಿದ್ಯಾರ್ಥಿಗಳು ಅನುಸರಿಸಬೇಕು ಅನ್ನುವುದು ಸರಿಯಲ್ಲ, ಅದನ್ನು ಇಲ್ಲಿನ ವಿದ್ಯಾರ್ಥಿಗಳು ಒಪ್ಪುವುದಿಲ್ಲ. ಅಲ್ಲಿ ಏನು ಒಳ್ಳೆಯದಿದೆಯೊ ಅದನ್ನು ಇಲ್ಲಿಗೆ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ತರಬೇಕು. ಅಲ್ಲಿ ಏನಾದರೂ ರಿಯಾಯಿತಿ ಇದ್ದರೆ, ಇಲ್ಲಿನ ವಿದ್ಯಾರ್ಥಿಗಳಿಗೆ ಕೊಡಿ, ಇಲ್ಲಿ ಏನಾದರೂ ರಿಯಾಯಿತಿ ಇದ್ದರೆ ಅಲ್ಲಿಗೆ ಕೊಡಿ. ಅದು ಬಿಟ್ಟು ಅಲ್ಲಿ ಏನಾದರೂ ಕಷ್ಟಗಳಿದ್ದರೆ ಇಲ್ಲಿಗೆ ತಂದು ಹಾಕಿ ಗೊಂದಲವನ್ನೆಬ್ಬಿಸಬೇಡಿ. ಏಕರೂಪತೆಯನ್ನು ತರುತ್ತೇನೆಂದು ಹೊಸಹೊಸದಾದಂಥ ಕೆಲಸವನ್ನು ಆತುರದಿಂದ ಮಾಡುತ್ತಿದ್ದೀರ. ಮೈಸೂರು ವಿದ್ಯಾರ್ಥಿಗಳು ನಿಮಗೆ ಹೊರಗೆ ಏನು ಹೇಳುತ್ತಿದ್ದಾರೆ, ಗೊತ್ತೆ, ತಾವು ರಾಜಿನಾಮೆಕೊಡಿ ಎಂದು ಬೀದಿಯಲ್ಲಿ ಕೂಗುತ್ತಿದ್ದಾರೆ. ತಮ್ಮಲ್ಲಿ ಪಕ್ಷಾತೀತ ಮನೋಭಾವ ಬೆಳೆಯ ಬೇಕಾದರೆ, ತಮ್ಮ ತಪ್ಪನ್ನು ಜಾಗ್ರತೆ ತಿದ್ದಿಕೊಳ್ಳಬೇಕು. ವಿದ್ಯಾ ಕ್ಷೇತ್ರ ಎನ್ನುವುದು ಬಹಳ ಮುಖ್ಯವಾದ ಕ್ಷೇತ್ರ, ಅಲ್ಲಿ ಒಂದು ನ್ಯಾಯವಾದ ನೀತಿಯನ್ನು ಅಳವಡಿಸಬೇಕು. ದೇಶದಲ್ಲಿ ಫೀ ಮತ್ತು ಅನೇಕ ವಿಚಾರಗಳಲ್ಲಿ ಗೊಂದಲವನ್ನು ಎಬ್ಬಿಸಿ ವಿದ್ಯಾರ್ಥಿಗಳನ್ನು ಸಂಕಷ್ಟಕ್ಕೆ ಈಡು ಮಾಡುತ್ತಿದ್ದೀರಿ. ವಿದ್ಯಾ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಒಂದು ನಂಬಿಕೆ ಬಂದು ನೆಮ್ಮದಿ ಇರಬೇಕು. ಈ ಕೂಡಲೆ ನೀವು ಏನು ತಪ್ಪು ಮಾಡಿದ್ದೀರೊ ಅದನ್ನು ಸರಿ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಪರಿಹಾರಕೊಡಬೇಕು. ಮೈಸೂರು ವಿಶ್ವವಿದ್ಯಾನಿಲಯವನ್ನು ಕಡೆಗಣ್ಣಿನಿಂದ ನೋಡುತ್ತಿದ್ದೀರಿ. ಇವತ್ತು ಮೈಸೂರು ವಿಶ್ವ ವಿದ್ಯಾನಿಲಯಕ್ಕೆ ಉಪಕುಲಪತಿಗಳೆ ಇಲ್ಲ. ತಾವು ಇನ್ನೂ ನೇಮಕ ಮಾಡಿಲ್ಲ. ಆಕ್ಟಿಂಗ್ ಅರೇಂಜ್‌ಮೆಂಟ್ ಕೂಡ ಇಲ್ಲ. ಯಾವ ಕೆಲಸವನ್ನೂ ಚುರುಕಾಗಿ ಮಾಡದೆ ಹೋದರೆ ವಿದ್ಯಾ ಕ್ಷೇತ್ರದಲ್ಲಿ ಯಾವ ಮಹತ್ತರ ಕೆಲಸವನ್ನು ಮಾಡುವುದಕ್ಕೆ ಸಾಧ್ಯ ಅನ್ನುವುದನ್ನು ತಾವೆ ಯೋಚನೆ ಮಾಡಿ. ಇಂಥ ವಿದ್ಯಾರ್ಥಿಗಳ ವಿಚಾರಗಳಲ್ಲಿ ಅವರಲ್ಲಿ ನಂಬಿಕೆ ಮೂಡುವಂತೆ ವರ್ತಿಸಬೇಕೆ ವಿನಃ ಗೊಂದಲ ಎಬ್ಬಿಸಲಿಕ್ಕೆ ಪ್ರಯತ್ನ ಮಾಡಬಾರದು. ಆದ್ದರಿಂದ ಸಾಕಷ್ಟು ಯೋಚನೆ ಮಾಡಿ, ವಿದ್ಯಾರ್ಥಿಗಳಿಗೆ ಬೇಕಾದ ಅನುಕೂಲ ಕಲ್ಪಿಸಿಕೊಟ್ಟು ಅವರ ಮನಸ್ಸಿನಲ್ಲಿ ನೆಮ್ಮದಿ ಉಂಟು ಮಾಡಬೇಕೆಂದು ಹೇಳಿ, ಮೈಸೂರು ವಿಶ್ವ ವಿದ್ಯಾನಿಲಯದ ವಿದ್ಯಾರ್ಥಿಗಳ ಮುಷ್ಕರದ ಬಗ್ಗೆ ಈ ಅಭಿಪ್ರಾಯಗಳನ್ನು ಇಟ್ಟು ಈ ಚರ್ಚೆಯನ್ನು ಪ್ರಾರಂಭಿಸಿದ್ದೇನೆ.

Mr. SPEAKER.—This is not the usual debate that takes place on a motion, but it is covered by Rules 59 to 62 to the best of my recollection, and it is not that everybody is entitled to speak, but the person who gives notice and perhaps the Minister makes a statement. Any other person who has given previous notice may be permitted to speak by the Speaker. The total time that can possibly be devoted for this Dabate is $2\frac{1}{2}$ hours. I should like to know what time we should devote to it ?

HON'BLE MEMBERS.—We leave it to the sweet will of the Chair.

Mr. SPEAKER.—Now, I am told that there is a deputation of the students desirous of meeting the Hon'ble Minister for Education. I do not think that we should make the students wait. Shall we have a half-hour Tea-break ? The Debate could perhaps be shortened.

Sri S. M. KRISHNA (Maddur).—Students have waited for 48 hours and they can wait for $2\frac{1}{2}$ hours more.

Mr. SPEAKER.—I am anxious to know the sense of the House. The matter is very important. It is agitating the minds of so many students and parents. As responsible public citizens, we are very much interested in it. Therefore; it is proper that we should not make the students wait when they have come. I cannot ask the Hon'ble Minister to go away when the Debate is going on. This is a matter on which, perhaps, the students would like to meet the Hon'ble Minister for Education and the Chief Minister also, or any other Minister. will not the very purpose of the Debate be better achieved if half-an-hour's time

is given and we reassemble at 3 'O' clock because the students have already come? Let the students meet the Minister.

HON'BLE MEMBERS.—Sir, we may reassemble at 3. 15 P. M.

Mr. SPEAKER.—The House now adjourns to reassemble at 3-15. P.M.

The House adjourned at Thirty-five Minutes past Two of the Clock and reassembled at Twenty-five Minutes past Three of the Clock.

[MR. DEPUTY SPEAKER in the Chair.]

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರಾದ ವಿರೋಧ ಪಕ್ಷದ ನಾಯಕರಾದ ಶಿವಪ್ಪನವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಹಳೆಯ ಮೈಸೂರು ವಿದ್ಯಾರ್ಥಿಗಳಿಗೆ ಆಗಿರತಕ್ಕ ಅನ್ಯಾಯದ ಬಗ್ಗೆ ನಾನೂ ನನ್ನ ಸ್ನೇಹಿತರಾದ ಶ್ರೀ ಮಾನ್ ಗೋಪಾಲ ಗೌಡರೂ ಮತ್ತು ಜಿ ರಾಮೇಗೌಡರೂ ಮೂರು ಜನರೂ ಇದೇ ಸಂಬಂಧದಲ್ಲಿ ಒಂದು ಮೋಷನ್ ಕೊಟ್ಟಿದ್ದೇವೆ. ಇದನ್ನು ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಬೇಕು.

1956 ರಲ್ಲಿ ನವಂಬರ್ ಒಂದನೆಯ ತಾರೀಖು ಈ ರಾಜ್ಯ ಒಂದಾದ ಮೇಲೆ ಮೂರು ಮಂತ್ರಿ ಮಂಡಲಗಳು ಬಂದು ಹೋದುವು. ಈ ಮೂರು ಮಂತ್ರಿಮಂಡಲಗಳು ಬಂದು ಹೋದ ಮೇಲೆ ವಿದ್ಯಾಭ್ಯಾಸದ ಖಾತೆಯಲ್ಲಿ ಇಷ್ಟು ಗೊಂದಲ ಆದದ್ದನ್ನು ನಾನು ಎಂದೂ ಕಾಣಲಿಲ್ಲ. 1962ನೆ ಮಾರ್ಚಿ—ಎಪ್ರಿಲ್ ತಿಂಗಳಿನಲ್ಲಿ ಬಂದಂಥ ಮಂತ್ರಿಮಂಡಲದ ವಿದ್ಯಾಭ್ಯಾಸ ಖಾತೆಯನ್ನು ಹೊತ್ತ ಮಂತ್ರಿಗಳು ಈ ರಾಜ್ಯದಲ್ಲಿ ಯಾವತ್ತೂ ನಡೆಯದೆ ಇರತಕ್ಕ ಗೊಂದಲವನ್ನು ಎಬ್ಬಿಸಿಬಿಡುತ್ತಿದ್ದಾರೆ. ಯಾವ ವಿಷಯದಲ್ಲಿ ಎಂದರೆ ಒಂದಲ್ಲ ನಾನಾ ತರಹ ವಿಷಯಗಳಲ್ಲಿ. ಫೀ ವಿಷಯದಲ್ಲಿ, ಟೆಕ್ಸ್ಟ್ ಬುಕ್ ವಿಷಯದಲ್ಲಿ, ಫೀ ರಿಯಾಯಿತಿ ವಿಷಯದಲ್ಲಿ, ಸ್ಕಾಲರ್‌ಷಿಪ್ ವಿಷಯದಲ್ಲಿ ಹೀಗೆ ನಾನಾ ವಿಚಾರಗಳಲ್ಲಿ ಹೇಳಿಕೆಗಳನ್ನು ಕೊಟ್ಟರು.

ಇದನ್ನು ಏಕೆ ಹೇಳುತ್ತಿದ್ದೇನೆಂದರೆ ನನ್ನ ಸ್ನೇಹಿತರು ಹೇಳಿದ ಹಾಗೆ ಇದರಲ್ಲಿ ಏಕರೂಪತೆಯನ್ನು ತರಬೇಕು, ಎಲ್ಲ ಭಾಗಗಳೂ ಒಂದಾಗಿರುವಾಗ ಎಲ್ಲ ವಿದ್ಯಾರ್ಥಿಗಳಿಗೂ ಒಂದೆ ತರಹ ಸೌಲಭ್ಯ ಇರಬೇಕು ಎಂದು ಇವರು ಮನಸ್ಸು ಮಾಡಿದರು. ಇವರು ಹೀಗೆ ಮನಸ್ಸು ಮಾಡುವಾಗ ಒಂದು ಅಲ್ಟೀರಿಯರ್ ಮೋಟಿವ್ ಇತ್ತು. ಹಳೆಯ ಮೈಸೂರಿನ ವಿದ್ಯಾರ್ಥಿಗಳಿಗೆ, ಅದರೊಳಗೂ ಬಡ ವಿದ್ಯಾರ್ಥಿಗಳಿಗೆ ಏನಾದರೂ ಮಾಡಬೇಕು ಎಂದು ಕುಳಿತುಕೊಂಡು ಒಂದು ಕಾನ್‌ಸ್ಪಿರೆಸಿ ನಡೆಸಿದರು. ಈ ಕಾನ್‌ಸ್ಪಿರೆಸಿಯಿಂದ ಉದ್ಭವವಾದದ್ದು ಏನು ಎಂದರೆ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಿಟ್ಟು ನಮಗೆ ಹಣ ಕೊಡುವುದಕ್ಕಾಗುವುದಿಲ್ಲ, ಇದನ್ನು ಹೊರುವುದಕ್ಕೆ ಸಾಧ್ಯವಿಲ್ಲ, ಫೀಸ್ ಕೊಡುವುದಕ್ಕೆ ಸಾಧ್ಯವಿಲ್ಲ, ಹಿಂದೆ ಏನೇನು ರಿಯಾಯಿತಿಗಳು ದೊರೆಯುತ್ತಿದ್ದುವೋ ಅವುಗಳಿಗೆಲ್ಲ ಇವತ್ತು ಗದಾ ಪ್ರಹಾರವಾಗಿದೆ ಎಂದು ವಿದ್ಯಾರ್ಥಿಗಳು ಮೆರವಣಿಗೆ ಬಂದರು. ಹೋದ ಸಾರಿ ಅನೇಕ ಹೇಳಿಕೆಗಳನ್ನು ವಿದ್ಯಾಭ್ಯಾಸ ಮಂತ್ರಿಗಳು ಈ ಸಭೆಯಲ್ಲಿ ಕೊಟ್ಟಿದ್ದಾರೆ. ಪಠ್ಯ ಪುಸ್ತಕಗಳ ವಿಷಯದಲ್ಲಿ, ಫೀ ರಿಯಾಯಿತಿ ವಿಷಯದಲ್ಲಿ, ಸ್ಕಾಲರ್‌ಷಿಪ್ ವಿಷಯದಲ್ಲಿ, ಇನ್ನೂ ಬೇರೆ ಬೇರೆ ವಿಚಾರಗಳಲ್ಲಿ ವಿದ್ಯಾ ಮಂತ್ರಿಗಳು ಕೊಟ್ಟಂಥ ಹೇಳಿಕೆಗಳು ಗಾಳಿಗೆ ಹೋದವು. ಇವರು ಅನೇಕ ಮೀಟಿಂಗುಗಳಲ್ಲಿ ಭಾಗವಹಿಸಿ ಹೇಳಿದ್ದಾರೆ. ಮಕ್ಕಳ ತಂದೆ ತಾಯಿಗಳು ಒಪ್ಪಿಗೆಯನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಸರ್ಕಾರ ಇದನ್ನು ಸೂಕ್ಷ್ಮವಾಗಿ ಮತ್ತು ವಿವರವಾಗಿ ಪರಿಶೀಲನೆ ಮಾಡಿ ಮಕ್ಕಳಿಗೆ ಆಗಿರತಕ್ಕ ಕಷ್ಟವನ್ನು ದೂರ ಮಾಡುವುದಕ್ಕೆ ಮುಂದಿನ ಸಾಲಿನಲ್ಲಿ ಸರ್ಕಾರ ಪ್ರಯತ್ನ ಮಾಡುತ್ತದೆ ಎಂದು ಅವರು ಒಂದು ಮಾತನ್ನು ಹೇಳಿದರು.

ಈ ಸಭೆಯಲ್ಲಿ ನಡೆದಂಥ ವಿಷಯವನ್ನು ಈಗ ಸಭಾಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಬಯಸುತ್ತೇನೆ. ಅಂಕಿ ಅಂಶಗಳನ್ನು ಪುನಃ ಹೇಳಬೇಕಾಗಿಲ್ಲ. ಕರ್ನಾಟಕ ಯೂನಿವರ್ಸಿಟಿಯಲ್ಲಿ ಎಷ್ಟು ವಿದ್ಯಾರ್ಥಿಗಳು ಇದ್ದಾರೆ ಮೈಸೂರು ಯೂನಿವರ್ಸಿಟಿಯಲ್ಲಿ ಎಷ್ಟು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ವಿದ್ಯಾರ್ಥಿಗಳು ಇದ್ದಾರೆ ಈಗ ಕೊಟ್ಟಿರುವ ಕನ್ಸೆಷನ್ ಏನು ಇದೆಯೋ ಅದನ್ನು ಸಮ ಮಾಡಿದರೆ ಏನು ಆಗುತ್ತದೆ ಎಂಬುದನ್ನು ಹೇಳಿದ್ದಾರೆ. ಈ ಮೊದಲು ಮಾತು ಕೊಟ್ಟಿರತಕ್ಕಂಥ ವಿದ್ಯಾ ಸಚಿವರು ಈ ಗೊಂದಲಕ್ಕೆ ಕಾರಣ ಆಗಿದ್ದಾರೆ. ಅವರು ವಿದ್ಯಾರ್ಥಿಗಳ ಮುಖಂಡರನ್ನು ಕಂಡು ಈ ಪ್ರಶ್ನೆ ವಿಮರ್ಶೆ ಮಾಡಿ ಗಲಾಟೆ ಇಲ್ಲದ ರೀತಿಯಲ್ಲಿ ಮಾಡುತ್ತೇವೆಂದು ಹೇಳಿದ್ದರು, ಆ ರೀತಿ ಮಾತು ಕೊಟ್ಟಿದ್ದರು. ಅಂಥ ಅಗಾಧ ನಷ್ಟವೇನೂ ಆಗುವುದಿಲ್ಲ. ಅನ್ಯಾಯ ಸರಿಪಡಿಸುತ್ತೇವೆಂದು ಹೇಳಿದ್ದರು. ಅಂಥಾ ಒಂದು ಗಹನ ಹೇಳಿಕೆ ಕೊಟ್ಟರು. ಆದರೆ ಇಂದು ವಿದ್ಯಾರ್ಥಿಗಳ ಮನಸ್ಸು ನೊಂದಿದೆ. ಈ ಬಗ್ಗೆ ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟರು, ಈ ಸಭೆಯಲ್ಲಿ ಸಹ ಹೇಳಿದರು. ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸಹ ಒಂದು ಹೇಳಿಕೆ ಕೊಟ್ಟರು. ಆದರೆ ಇಂದು ಏನಾಗಿದೆ? ಯಾರು ಈ ದೇಶದ ಮುಂದಿನ ಪ್ರಜೆಗಳಾಗುತ್ತಾರೋ, ಯಾರನ್ನು ತಯಾರುಮಾಡಿ ದೇಶದ ಆಗುಹೋಗುಗಳನ್ನು ಯಾರು ಭುಜದ ಮೇಲೆ ಇಡಬೇಕೆಂದು ಮಾಡಿದ್ದೇವೆಯೋ ಅಂಥವರ ಕೂಡ ಇಂದು ವಿದ್ಯಾ ಸಚಿವರು ಸರಸವಾಡುತ್ತಿದ್ದಾರೆ. ಇಂದು ಕಬ್ಬನ್ ಪಾರ್ಕಿನಲ್ಲಿ ಒಬ್ಬ ವಿದ್ಯಾರ್ಥಿಯನ್ನು ನಾಲ್ಕು ಜನ ಪೋಲಿಸರು ಸುತ್ತುವರಿದು ಕೂತಿದ್ದಾರೆ. ಕನ್‌ಸೆಷನ್ ಬೇಕು ಎಂದು ಕೇಳತಕ್ಕಂಥ ವಿದ್ಯಾರ್ಥಿಗಳ ಸುತ್ತುಮುತ್ತು ಒಬ್ಬನಿಗೆ ನಾಲ್ಕು ಜನ ಪೋಲಿಸರು ಪುಂಡಾಟಿಕೆ ಹೂಲಿಗಾನಿಸಂ ಆಗುವ ಕಾಲದಲ್ಲಿಯ ಹಾಗೆ ಸುತ್ತುವರಿದು ಕೂತಿದ್ದಾರೆ. ಇಂಥ ಗೊಂದಲಕ್ಕೆ ಅಧಿಕಾರದಲ್ಲಿರತಕ್ಕವರು ಅವಕಾಶ ಕೊಡಬಾರದು. ಯಾವದೇ ಕಾನೂನು ಮಾಡುವುದರಿಂದ ದೇಶದಲ್ಲಿ ಅಶಾಂತಿಯುಂಟಾಗಬಾರದು. ಮಕ್ಕಳಿಗೆ ಕೊಡತಕ್ಕಂಥ ವಿದ್ಯಾಭ್ಯಾಸದ ಈ ಸೌಕರ್ಯದಿಂದ ಸರಕಾರಕ್ಕೆ ಎಂಟು ಲಕ್ಷಕ್ಕಿಂತ ಹೆಚ್ಚು ಖರ್ಚು ಬರುವುದಿಲ್ಲ ಎಂದು ನನ್ನ ಭಾವನೆ. ಇದಕ್ಕೋಸ್ಕರ ಇಡೀ ಸಂಸ್ಥಾನದಲ್ಲಿಯ ಜನತೆಯ ಮನವನ್ನು ಗೊಂದಲಕ್ಕೆ ಸಿಕ್ಕುವಂತೆ ಮಾಡಿ ಶಾಂತತೆ ಕಲಕಿದಂತಾಗಿದೆ. ಈ ರೀತಿ ಮಾಡಿ ವಿದ್ಯಾ ಮಂತ್ರಿಗಳು ಯಾರಿಗೆ ಉಪಕಾರ ಮಾಡಬೇಕೆಂದು ಹೊರಟಿದ್ದಾರೋ ತಿಳಿಯುವುದಿಲ್ಲ. ವಿದ್ಯಾ ಮಂತ್ರಿಗಳನ್ನು ಬಿಟ್ಟರೆ ಬೇರೆ ಯಾರಿಂದಲೂ ತಲೆ ನೋವು ಮಂತ್ರಿ ಮಂಡಳಕ್ಕೆ ಬರುವುದಿಲ್ಲ. ಆದುದರಿಂದ ವಿದ್ಯಾ ಮಂತ್ರಿಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸರಿಯಾಗಿ ಎಚ್ಚರಿಕೆ ವಹಿಸದೆ ಹೋದರೆ ತಲೆ ನೋವು ಇದ್ದೇ ಇರುತ್ತದೆ. ಯಾವ ಮಂತ್ರಿಯೂ ಕೂಡ ಇವರಷ್ಟು ವಿವಾದ ಉಂಟು ಮಾಡಿ ತಲೆ ಕೆಡಿಸಿಲ್ಲ. ನಿಮ್ಮ ಮಕ್ಕಳಿಂದ ಇಂದು ಸ್ಟ್ರೈಕ್ ನಡೆಯುತ್ತಿದೆ. ಮೈಸೂರಿನ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ನಿಜಲಿಂಗಪ್ಪನವರು ಈ ವಿಷಯವನ್ನು ಶಾಂತ ಚಿತ್ತದಿಂದ ಆಲೋಚನೆ ಮಾಡುತ್ತಾರೆಂದು ನನ್ನ ಭಾವನೆ. ಈ ಮುಷ್ಕರದಿಂದ ಶ್ರೀ ನಿಜಲಿಂಗಪ್ಪನವರು ಮನಸ್ಸು ಭಾರ ಮಾಡಿಕೊಂಡಿದ್ದಾರೆ. ಒಂದು ಒಳ್ಳೇ ಕೆಲಸಕ್ಕಾಗಿ ಐದಾರು ಲಕ್ಷ ರೂಪಾಯಿ ಹೋದರೂ ಚಿಂತೆಯಿಲ್ಲ ಎಂದು ಅವರು ಅನೇಕ ಸಲ ಹೇಳಿದ್ದಾರೆ. ಈ ಸಭೆಯಲ್ಲಿ ಸಹ ಇದನ್ನು ಹೇಳಿದ್ದಾರೆ. ವಿವಾದ, ಗೊಂದಲ ಎಬ್ಬಿಸತಕ್ಕಂಥ ವಿದ್ಯಾ ಮಂತ್ರಿಗಳಿಂದ ವಿಚಿತ್ರ ಪರಿಸ್ಥಿತಿ ಉಂಟಾಗಿದೆ. ಫೀಜ್ ವಿಚಾರದಲ್ಲಿ ಅನ್ಯಾಯವಾಗುವ ಆರ್ಡರ್ ಮಾಡಿದ್ದರಿಂದ ಫೀಜ್ ಕೊಡುವುದಕ್ಕಾಗುವುದಿಲ್ಲ ಎಂದು 400 ಮಕ್ಕಳು ವಿದ್ಯಾಭ್ಯಾಸ ಬಿಟ್ಟುಕೊಟ್ಟು ಹೊರಗೆ ಬರಬೇಕಾಯಿತು. ವಿದ್ಯಾರ್ಥಿಗಳ ಮೂಲಭೂತ ಹಕ್ಕಿಗೆ ಗದಾಪ್ರಹಾರ ನಡೆದಿದೆ. ದೇಶದಲ್ಲಿ ಇಂದು ವಿದ್ಯಾ ಸಚಿವರು ಗೊಂದಲ ಎಬ್ಬಿಸಿ ಶಾಂತಿಗೆ ಕುಠಾರಪ್ರಾಯರಾಗಿ ಶ್ರೀಮಾನ್ ನಿಜಲಿಂಗಪ್ಪನವರ ತಲೆ ನೋಯಿಸಿ, ತಲೆ ಕೆಡಿಸುತ್ತಿದ್ದಾರೆ.

3-30 P.M.

ಶ್ರೀ ಎಸ್. ನಿಜಲಿಂಗಪ್ಪ.—ನನ್ನ ತಲೆ ಕೆಡಿಸುವುದಕ್ಕೆ ಹೋಗಬೇಡಿ. ಏನಾಗಿದೆ ವಿಷಯ ಹೇಳಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಂದು ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಅದನ್ನು ಮುಖ್ಯ ಮಂತ್ರಿಗಳು ದಯವಿಟ್ಟು ನೋಡಬೇಕು. ವಿದ್ಯಾಭ್ಯಾಸ ಮಾಡುವ ಮಕ್ಕಳಿಗೆ ಈ ಕನ್‌ಸೆಷನ್ ಕೊಟ್ಟರೆ ನಾಲ್ಕು ಲಕ್ಷ ರೂಪಾಯಿ ಖರ್ಚು ಆಗಬಹುದು. ರಾಜ್ಯದಲ್ಲಿ ಒಂದೇರೀತಿಯಾಗಿ ಸಮ ಮಾಡುತ್ತೇನೆಂದು ಗೊಂದಲ ಎಬ್ಬಿಸಿದ್ದಾರೆ. ಈ ಸಭೆಯಲ್ಲಿ ಮಂತ್ರಿ ಮಂಡಳದಲ್ಲಿ ಎಷ್ಟೊಂದು ಗೊಂದಲಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ದಯವಿಟ್ಟು ಕಬ್ಬನ್ ಪಾರ್ಕಿಗೆ ಹೋಗಿ ನೋಡಿಕೊಂಡು ಬನ್ನಿ. ಮಕ್ಕಳು ಬಿಸಿಲಿನಲ್ಲಿ ನಿಂತಿದ್ದಾರೆ. ಅವರನ್ನು ಪೋಲಿಸರು ಸುತ್ತುವರಿದಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳಿಗೂ ಮಕ್ಕಳಿದ್ದಾರೆ. ಈ ಮಕ್ಕಳ ವಿಚಾರದಲ್ಲಿ ಕನಿಕರ ಇರಲಿ. ಅಂಕಿ ಅಂಶಗಳನ್ನು ವಿಮರ್ಶೆ ಮಾಡಿ ನೋಡುತ್ತೇವೆಂದು ತಾವು ಕೊಟ್ಟ ಮಾತನ್ನು ಉಳಿಸಿಕೊಳ್ಳದೇ ಹೋದರೆ ಸರಕಾರವನ್ನು ಜನ ನಂಬುವುದಿಲ್ಲ. ಅನೇಕ ಭಾಷಣಗಳಲ್ಲಿ ಹೇಳಿದ್ದೀರಿ. ಈ ಸಭೆಯಲ್ಲಿ ಕೂಡ ಹೇಳಿದ್ದೀರಿ. ಅದು ಪ್ರೊಸೀಡಿಂಗ್ಸಿನಲ್ಲಿ ಇದೆ. ನನಗೆ ಕಾಲಾವಕಾಶ ಕೊಟ್ಟರೆ ತಂದು ತೋರಿಸುತ್ತೇನೆ. ಆಡಿದ ಮಾತನ್ನು ನೆನಪು ಮಾಡಿಕೊಳ್ಳೋಣವಾಗಲಿ. ನಿಮ್ಮ ಮೇಲೆ ರಿಫ್ಲೆಕ್ಷನ್ ಆಗುವ

ರೀತಿಯಲ್ಲಿ ಆಡಳಿತದ ಮೇಲೆ ಕಪ್ಪು ಮಸಿ ಬಳಿಯುವ ರೀತಿಯಲ್ಲಿ ಮಾಡುವುದು ಸರಿಯಲ್ಲ. ಇದನ್ನು ತಡೆಗಟ್ಟದೇ ಹೋದರೆ ನಿಮಗೆ ಕಪ್ಪು ಮಸಿ ಬಳಿಯುವುದಕ್ಕೆ ವಿದ್ಯಾ ಮಂತ್ರಿಗಳು ಸರ್ವ ಪ್ರಯತ್ನ ಮಾಡುತ್ತಿದ್ದಾರೆ, ಈ ರೀತಿ ಮಾಡಿ ನಿಮ್ಮನ್ನು ಜೋಕುಮಾರನನ್ನಾಗಿ ಮಾಡಲು ಹೊರಟಿದ್ದಾರೆ.

ಜೋಕುಮಾರ ಎಂದರೆ ಗೌರಿ ಹಬ್ಬದಲ್ಲಿ ದೃಷ್ಟಿ ಪರಿಹಾರಕ್ಕಾಗಿ ವಕ್ರ ವಕ್ರವಾಗಿ ಒಂದು ಬೊಂಬೆ ಮಾಡಿ ತರುತ್ತಾರೆ. ಹಾಗೆ ಬಹಳ ಬುದ್ಧಿವಂತರು, ಬಹಳ ವಿವೇಚನಾ ಶೂರರು ಎಂದು ಹೇಳಿ......

[MR. SPEAKER in the Chair]

Mr. SPEAKER.—How is the House interested in the quarrel between the Chief Minister and the Education Minister ? (*Laughter*).

Sri C. J. MUCKANNAPPA.—That is not my concern Sir. I am only appealing to the Chief Minister that a particular Minister is bringing head-ache to him and is creating complications.

Sri S. M. KRISHNA —When did the Hon'ble Member diagonise that it is head-ache and not stomach-ache Sir ? (*Laughter*).

Sri S. NIJALINGAPPA.—There is no ache at all.

Mr. SPEAKER.—Are we discussing what best advice could be tendered to the Chief Minister or are we discussing the subject before the House ?

Sri C. J. MUCKANNAPPA.—It is the Chief Minister who can give relief, Sir.

Mr. SPEAKER.—And the advice should relate to the point before the House.

Sri C. J. MUCKANNAPPA.—It is the Chief Minister that has to look into this matter and diagonise the remedy to the whole thing and he should not mind spending about 3 or 4 lakhs. The Education Minister thinks that it is a huge amount. I am only making an earnest appeal to the Chief Minister through you, Sir.

ನಾನು ತಮ್ಮಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದ್ದೇನೆ ಇವತ್ತು ಆ ಮಕ್ಕಳು ಶಾಲೆಗೆ ಹೋಗದೆ ಸ್ಟ್ರೈಕ್ ಮಾಡುತ್ತಾ ಇದ್ದಾರೆ, ನಮಗೆ ಫೀಜು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾ ಇದ್ದಾರೆ. ಅದಕ್ಕೆ ನಿಜವಾಗಿಯೂ ಕಾರಣ ಇದೆ, ಅವರು ಬಡತನದಿಂದ ಬಳಲುತ್ತಾ ಇದ್ದಾರೆ, 60, 70, 100 ರೂಪಾಯಿ ಸಂಬಳ ತಗೆದುಕೊಳ್ಳತಕ್ಕ ಸರ್ಕಾರಿ ನೌಕರರ ಮಕ್ಕಳು ಅವರಲ್ಲಿ ಇದ್ದಾರೆ, ವರ್ಷಕೆ 4–5–6 ಪಲ್ಲಾ ಬೆಳೆಯತಕ್ಕ ರೈತನ ಮಕ್ಕಳು ಇದ್ದಾರೆ, ಅಂತಹವರ ಮಕ್ಕಳು ಶಾಲಾ ಕಾಲೇಜುಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ, ಅವರಿಗೆ ಏನು ಕನ್‌ಸೆಷನ್ ಇತ್ತೋ ಆ ಕನ್‌ಸೆಷನ್ ಬೇಡ ಅಂತ ಹೇಳಿ ನೀವು ಅಡ್ಡಿ ಬಂದಿದ್ದೀರಿ ಅದನ್ನು ಮತ್ತೆ ಪುನರ್‌ವಿಮರ್ಶೆ ಮಾಡ ಬೇಕು, ಪುನರ್ವಿಮರ್ಶೆ ಮಾಡಿ ಯಾವ ದೊಡ್ಡ ಪರಿತಾಪ ಉಂಟಾಗಿದೆ ಅದನ್ನು ನಿವಾರಣೆ ಮಾಡು ವುದಕ್ಕೆ ಪ್ರಯತ್ನ ಪಡಬೇಕು. ಆ ರೀತಿ ಮಾಡಲು ಪ್ರಯತ್ನಪಡದಿದ್ದರೆ ಅದರಿಂದಾಗತಕ್ಕ ಕೆಟ್ಟ ಪರಿಣಾಮವೇನಿದೆ ಅದನ್ನು ಇವತ್ತು ಹೇಳುವುದಕ್ಕೆ ಆಗುವುದಿಲ್ಲ, ತಾವು ಪ್ರಶಾಂತವಾಗಿದ್ದಾಗ ಅದು ತಮ್ಮ ಮನಸ್ಸಿಗೇ ಅರ್ಥವಾಗುತ್ತದೆ. ನಿಜವಾಗಿಯೂ ಕೂಡ ಇದು ಸತ್ಯವಾದ ಮಾತು ಇದಕ್ಕೆ ಬೆಲೆ ಕೊಡಬೇಕು ಎಂದು ತಾವೂ ಯೋಚನೆ ಮಾಡುತ್ತಾ ಇದ್ದೀರಿ, ಆದರೆ ಒಂದು ವಿಷಯ ಮಾತ್ರ ಹೇಳುತ್ತೇನೆ ಬೆಳಿಗ್ಗೆ ಈಗತಾನೆ ಪತ್ರಿಕೆಗಳಲ್ಲಿ ಶ್ರೀಮಾನ್ ಜತ್ತಿಯವರು, ಹಣಕಾಸಿನ ಸಚಿವರು ಒಂದನೇ ತಾರೀಖು ಸಂಬಳ ಕೊಡುವುದಕ್ಕೆ ದುಡ್ಡಿಲ್ಲ ಎಂದು ಹೇಳಿದ್ದನ್ನು ಓದಿದೆ.

ಶ್ರೀ ಎಸ್. ನಿಜಲಿಂಗಪ್ಪ.—ಆ ರೀತಿ ಹೇಳಿಲ್ಲ.

ಶ್ರೀ ಸಿ. ಜೆ. ಮುಣ್ಣಕ್ಕಪ್ಪ.—ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಆ ರೀತಿ ಇದೆ.

† Sri B. D. JATTI (Minister for Finance).—Sir, that statement is not correct. I only said that if I go on yielding for the pressure of everybody, it would become difficult to pay the salaries of Government servants. But, I have never said that I will stop the payment from January 1st to the Government servants. It is not correct.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಉರಿಯುವ ಕೊಳ್ಳಿಗೆ ಎಣ್ಣೆ ಹಾಕುವ ಜನ ಎಲ್ಲಿಯವರೆಗೆ ತಮ್ಮ ಪಕ್ಕದಲ್ಲಿ ಇರುತ್ತಾರೆಯೋ ಅಲ್ಲಿಯ ತನಕ ಅವರು ಯಾವ ಯಾವ ಬಣವೆಗೆ ಬೆಂಕಿ ಹಾಕುತ್ತಾರೆಯೋ ಗೊತ್ತಿಲ್ಲ.

Mr. SPEAKER.—The Hon'ble Member is now developing an idea of "ಉರಿಯುವ ಕೊಳ್ಳಿ". (*Laughter*)

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತುಪ್ಪ, ಎಣ್ಣೆ, ಸೀಮೇ ಎಣ್ಣೆ ಏನೇನು ಬೇಕೋ ಅದನ್ನೆಲ್ಲಾ ಸುರಿಯುತ್ತಾರೆ, ಈಗಾಗಲೇ ಅದು ಉರಿಯುತ್ತಾ ಇದೆ. ಇಷ್ಟೇ ಅಲ್ಲದೇ ಇನ್ನೊಬ್ಬರು ಮಾತ ನಾಡುವಾಗ ತಲೆ ಹಾಕಿ, ಕೆಣಕಿ ಏನಾದರೂ ಅನ್ನಬೇಕು, ಅನ್ನಿಸಿಕೊಳ್ಳಬೇಕು ಎನ್ನುವ ಮನೋ ವೃತ್ತಿ ಅವರಲ್ಲಿ ಏಕೆ ಇದೆಯೋ ನನಗೆ ಗೊತ್ತಾಗುತ್ತಾ ಇಲ್ಲ. ನಾನು ತಮ್ಮಲ್ಲಿ ನೇರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದ್ದೇನೆ. ಮುಖ್ಯಮಂತ್ರಿಗಳು ಬಹಳ ಒಳ್ಳೆಯವರು ಇದ್ದೀರಿ, ಅದನ್ನು ಒಪ್ಪುತ್ತಾ ಇದ್ದೇನೆ, ಆದ್ದರಿಂದ ತಾವು ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಬೇಕು. ಆ ಮಕ್ಕಳಿಗೆ ಯಾವ ಕನ್‌ಸೆಷನ್ ದೊರೆಯಬೇಕೋ ಅದನ್ನು ದೊರಕಿಸಿಕೊಡುವುದಕ್ಕೆ ಸರ್ವ ಪ್ರಯತ್ನ ವನ್ನೂ ಮಾಡಬೇಕು, ಯಾವುದಾದರೂ ಒಂದು ರೀತಿಯಲ್ಲಿ ತಮ್ಮ ಖರ್ಚನ್ನು ಕಡಿಮೆ ಮಾಡಿಕೊಂಡು ಆ ಮಕ್ಕಳಿಗೆ ಉದಾರ ಮನಸ್ಸಿನಿಂದ ಸಹಾಯ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದ್ದೇನೆ. ಏಕೆಂದರೆ ಅವರು ಒಂದು ಸಂದರ್ಭದಲ್ಲಿ ಇಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ —ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಯಾವ ರೀತಿ ಮುಂದೆ ಬರಬೇಕೆಂದು ಆಶೆ ಇದೆಯೋ ಅದೇ ರೀತಿ ಬಡವರ ಮಕ್ಕಳೂ ಮುಂದೆ ಬರಬೇಕೆಂಬ ಆಶೆ ನನಗಿದೆ, ಅಂತಹ ರಾಜ್ಯವನ್ನು ಕಟ್ಟುವುದಕ್ಕೆ ನಾನು ದುಡಿಯುತ್ತೇನೆ ಎಂದು ಈ ಸಭೆಯಲ್ಲಿ ಅವರು ಭಾಷಣ ಮಾಡಿದ್ದಾರೆ. ಆದ್ದರಿಂದ ತಮ್ಮ ಮಕ್ಕಳನ್ನು ಯಾವ ದೃಷ್ಟಿಯಲ್ಲಿ ಇಟ್ಟುಕೊಂಡಿದ್ದೀರೋ ಅದೇ ರೀತಿ ಎಲ್ಲರನ್ನೂ ನೋಡದೇ ಇದ್ದ ಪಕ್ಷ ದಲ್ಲಿ ಇವತ್ತಿನ ದಿವಸ ಬೀದಿಯಲ್ಲಿ ಅಲೆಯುತ್ತಾ ಇರುವ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಸ್ಕಾಲರ್ ಷಿಪ್ ಇಲ್ಲದೇ ಇದ್ದರೆ, ಫ್ರೀ ಷಿಪ್ ಇಲ್ಲದೇ ಇದ್ದರೆ ಅವರು ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರವೇ ಸ್ಟ್ರೈಕ್ ಮಾಡಿದ್ದಾರೆ ಅದಕ್ಕೆ ಬೆಲೆ ಕೊಡಬೇಕು. ಇದು ಯಾರೊಬ್ಬ ರಿಂದಲೂ ಪ್ರಚೋದಿತವಾಗಿಲ್ಲ, ಕಾಂಗ್ರೆಸ್‌ನಿಂದ ಅಲ್ಲ, ಕಮ್ಯೂನಿಸ್ಟ್‌ರಿಂದ ಅಲ್ಲ. ಪಿ ಎಸ್ ಪಿ ಅವರಿಂದ ಅಲ್ಲ, ಯಾವುದೇ ರಾಜಕೀಯ ಪಕ್ಷದಿಂದಲೂ ಅಲ್ಲ.

ಶ್ರೀ ಎಸ್. ಆರ್. ಕಂಠಿ.—ಇಂಡಿಪೆಂಡೆಂಟ್ಸ್‌ನಿಂದಲೋ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವತ್ತಿನ ದಿವಸ ನಾನು ಅವರಲ್ಲಿ ಅಪೀಲು ಮಾಡಿಕೊಳ್ಳುತ್ತೇನೆ. ಇಂತಹ ಗಹನವಾದ ವಿಷಯ ಮಾತನಾಡುವಾಗ ತಮಾಷೆ ಮಾಡುವುದಾಗಲೀ ಅಥವಾ ಬಹಳ ಲೈಟ್ ಹಾರ್ಟೆಡ್ ಆಗಿ ಟ್ರೀಟ್ ಮಾಡುವುದಾಗಲೀ ಸರ್ವಥಾ ನ್ಯಾಯವಾದುದಲ್ಲ, ಇದು ಎಲ್ಲರ ಮನ ಸ್ಸನ್ನೂ ಕಲಕಿರತಕ್ಕ ವಿಷಯ, ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಮ್ಮ ಕಷ್ಟವನ್ನು ಸರ್ಕಾರದವರಿಗೆ ನಿವೇದನೆ ಮಾಡಿಕೊಳ್ಳುವುದಕ್ಕೆ ಇವತ್ತಿನ ದಿವಸ ಸ್ಟ್ರೈಕ್ ಮಾಡಿದ್ದಾರೆ. ಆದ್ದರಿಂದ ಸರ್ಕಾರದವರು ಮತ್ತು ಮುಖ್ಯ ಮಂತ್ರಿಗಳು ಇದನ್ನು ಯೋಚನೆ ಮಾಡಬೇಕು ಮತ್ತು ಹಣಕಾಸಿನ ಮಂತ್ರಿಗಳು ಇದಕ್ಕೆ ಏನೂ ಅಡ್ಡಿ ತಂದೊಡ್ಡಬಾರದು, ಇವತ್ತಿನ ಸ್ಟ್ರೈಕ್ ಒಂದು ದುರಂತವನ್ನು ಮುಟ್ಟುವುದಕ್ಕೆ ಮುಂಚೆ ಪೋಲೀಸ್‌ನವರು ಲಾಠಿಚಾರ್ಜು ಮಾಡುವುದಕ್ಕೆ ಮುಂಚೆ, ಅಪಾಯವಾಗುವುದಕ್ಕೆ ಮುಂಚೆ ಮುಖ್ಯಮಂತ್ರಿಗಳು ಬಹಳ ಗಹನವಾದ ಈ ವಿಷಯವನ್ನು ಪರಿಶೀಲನೆ ಮಾಡಿ ಆ ಮಕ್ಕಳಿಗೆ ಪರಿಹಾರ ಕೊಡಬೇಕೆಂದು ಹೇಳಿ ಅವರಲ್ಲಿ ಪ್ರಾರ್ಥನೆ ಮಾಡಿಕೊಂಡು ಅವರು ಈ ಕಡೆಗೆ ಗಮನ ಕೊಡುತ್ತಾರೆ ಎಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಈಗ ಏನಾಗಿದೆಯೆಂದರೆ: ನಿಜವಾಗಿಯೂ ಇದು ಬಹಳ ಗಂಭೀರವಾದ ವಿಚಾರ. ಇದುವರೆಗೂ ಮಾತನಾಡಿದ್ದರಲ್ಲಿ ಒಂದು ಮುಖ್ಯವಾದ ಪಾಯಿಂಟ್ ಏನಾಗಿದೆ ಎಂದರೆ—ಈ ನ್ಯಾಷನಲ್ ಎಮೋಷನಲ್ ಇಂಟಿಗ್ರೇಷನ್ ವಿಚಾರದಲ್ಲಿ ನಾವು ಎಲ್ಲಿಯ ವರೆಗೆ ಸಾಗಿದ್ದೇವೆ ಎಂದರೆ ಈ ವಿದ್ಯಾರ್ಥಿಗಳು ಕೊಡತಕ್ಕ ಕಾಲೇಜ್ ಶುಲ್ಕವನ್ನು ಡಬ್ಬಲ್ ಮಾಡುವ ಮಟ್ಟಕ್ಕೆ ನಾವು ಹೋಗಿದ್ದೇವೆಂದು ಅವರು ಹೇಳಿದ್ದಾರೆ. ಇದರ ಒಟ್ಟು ಸಾರಾಂಶ ಅವರು ಕೊಟ್ಟ ಆಶ್ವಾಸನವನ್ನು ಉಳಿಸಿಕೊಳ್ಳದೆ, ಅವರು ಕೇವಲ ನಟನಾಚಾರ್ಯರಾಗಿದ್ದಾರೆ ಎಂಬುದಾಗಿ ಇಷ್ಟು ಮುಖ್ಯ ವಿಚಾರ ಈಗ ಬಂತು. ಆದರೆ ಇಲ್ಲೀಗ ಮುಖ್ಯವಾಗಿ ಇಷ್ಟು ಪ್ರೊಟೆಸ್ಟ್ ಏಕೆ ಬಂದಿತು ಎಂಬುದನ್ನು ನಾವು ಮೊದಲು ಕಂಡುಹಿಡಿಯಬೇಕಾದ್ದು ನಮ್ಮ ಪ್ರಥಮ ಕರ್ತವ್ಯ. ನಮ್ಮ ಹಳೇ ಮೈಸೂರಿನ ವೈಶಿಷ್ಟ್ಯವೇ ಒಂದು ರೀತಿಯದು. ಇಲ್ಲಿ ವಿದ್ಯೆಗಿದ್ದಷ್ಟು ಪುರಸ್ಕಾರ ಇಂಡಿಯಾ ದೇಶ ದಲ್ಲಿ ಮತ್ತೆಲ್ಲಿಯೂ ಇರಲಿಲ್ಲ. ಇದು ಒಂದು ನಮ್ಮ ಮೈಸೂರಿನ ವಿಶೇಶ ವೈಶಿಷ್ಟ್ಯ. ಈ ದಿವಸ ಇಲ್ಲಿ ನಮ್ಮ ವಿದ್ಯಾರ್ಥಿಗಳು ಹಿಂದೆ ಕೊಡುತ್ತಿದ್ದ ಶುಲ್ಕದ ಎರಡರಷ್ಟನ್ನು ವಸೂಲ್ಮಾಡುತ್ತಿದ್ದಾರೆ. ಈ ಹಿಂದೆ ಸರ್ಕಾರದವರು ಹಣವಂತರಿಂದ ಅಷ್ಟಿಷ್ಟು ಕಿತ್ತು ಬಡವರಿಗೆ ಸಹಾಯ ಮಾಡುತ್ತೇವೆಂದು

ಹೇಳಿದ್ದರು. ಈ ದಿವಸ ಸರ್ಕಾರದವರು ಅದನ್ನು ಮಾಡದಿದ್ದರೆ ಮನುಷ್ಯನಿಗೆ ಅತಿ ಮುಖ್ಯವಾಗಿ ಬೇಕಾಗಿರುವುದು, ನಂಬಿಕೆ, ಆ ನಂಬಿಕೆ ಕಳೆದುಕೊಂಡ ಮೇಲೆ ಅದು ಅನಂತ ಕೆಡುಕುಗಳಿಗೆ ದಾರಿ ಮಾಡುತ್ತದೆ. ಈ ಹಿಂದೆ ಹಳೇ ಮೈಸೂರು ರಾಜ್ಯದಲ್ಲಿ ಸರ್ಕಾರದಲ್ಲಿದ್ದಂಥ ಐಶ್ವರ್ಯ ಖಾಸಗಿ ವ್ಯಕ್ತಿಗಳಲ್ಲಿರಲಿಲ್ಲ. ಕಾರಣ Public Sector Industries ಜಾಸ್ತಿ ಇತ್ತು. ಆದರೆ ಅದರ ಬದಲು ಜನರಲ್ಲಿ ಹೆಚ್ಚಿಗೆ ವಿದ್ಯೆ ಇತ್ತು. ಆದರೆ ಹೊಸ ಮೈಸೂರಿನ extended area ದ ಜನಗಳಲ್ಲಿ ಹಣ ಜಾಸ್ತಿ ಇರಬಹುದು. ಆದರೆ ನಮ್ಮ ಹಳೇ ಮೈಸೂರಿನಲ್ಲಿ ನಾವು ಈ ವಿದ್ಯೆಗಾಗಿ ಸರ್ಕಾರವನ್ನೇ ನಂಬಿಕೊಂಡಿದ್ದೆವು. ವಿದ್ಯೆಕ್ಕೆ ನಮಗೆ ಅದೊಂದೇ ದಾರಿ ಇದ್ದದ್ದು. ಈಗ ತಾವು ಅದಕ್ಕೆ ಅಡ್ಡ ಬಂದರೆ ನಾನು ಮುಚ್ಚುಮರೆ ಮಾಡುವುದಿಲ್ಲ, ಬಹಳ ಅನರ್ಥಗಳಾಗುತ್ತವೆ ಎಂದು ಅಷ್ಟು ಮಾತ್ರ ಹೇಳಲಿಚ್ಛಿಸುತ್ತೇನೆ. ನಾನಾದರೂ ಇದನ್ನು ಏಕೆ ಹೇಳುತ್ತಿದ್ದೇನೆಂದರೆ: ಇಲ್ಲಿ ಕರ್ಣಾಟಕ ರಾಜ್ಯ ಸ್ಥಾಪನೆಗಾಗಿ ಆಳವಾಗಿ ನಿಂತು ಬಹಳ ಸಂಯಮದಿಂದ ಕಷ್ಟಾಯವಾಗಿ ಹೋರಾಟಮಾಡಿ ಈ ರಾಜ್ಯವನ್ನು ಕಟ್ಟಿದಂಥ ನಮ್ಮ ಸಭಾನಾಯಕರಿರುವುದರಿಂದ ನಾನು ಇದನ್ನು ಹೇಳುತ್ತಿದ್ದೇನೆ. ಈಗಾಗಲೇ ಈ ವಿದ್ಯಾರ್ಥಿಗಳ ಚಳುವಳಿ ಎರಡನೇ ಘಟ್ಟವನ್ನು ಮುಟ್ಟಿದೆ. ಈಗಲಾದರೂ ನಮ್ಮ ಮುಖ್ಯ ಮಂತ್ರಿಗಳು ಇದಕ್ಕೆ ಮನಸ್ಸು ಕೊಟ್ಟರೆ ಮಾತ್ರ ಇದು ಸರಿಹೋಗುತ್ತದೆ ಎಂದು ನಾನು ಹೇಳುತ್ತೇನೆ. ಆದುದರಿಂದ ಅವರು ಈಗಾಗಿರತಕ್ಕ ತಪ್ಪನ್ನು ಒಪ್ಪಿಕೊಂಡು ಈ ಬಗ್ಗೆ ನಿರ್ಣಾಯಕ ವಾಗಿ ಒಂದು ಕೆಲಸವನ್ನು ಮಾಡಲೇಬೇಕಾಗಿದೆ. ಹಾಗೆ ಸಾಧ್ಯವಾಗುವುದಿಲ್ಲ ಎನ್ನುವುದಾದರೆ ಅಂಥ ನಾಯಕತ್ವವು ಇರಲೇಬಾರದು. ವಿದ್ಯಾರ್ಥಿಗಳ ಬೇಡಿಕೆಯಾದರೋ ಸಾಧುವಾಗಿದೆ. ಇದನ್ನು ಒಪ್ಪಿಕೊಳ್ಳದೆ ಹೋದರೆ ಆ ಎಮೋಷನಲ್ ಇಂಟಿಗ್ರೇಷನ್ ಅನ್ನುವುದೇನಿದೆ ಅದರಲ್ಲಿ ಹಿಂದಕ್ಕೆ ಹೆಜ್ಜೆಯಿಡಲು ಇದೇ ಕಾರಣವಾಗುತ್ತದೆ. ಆದರೆ ನನಗೆ ಇಲ್ಲಿ ಒಂದು ಅರ್ಥವಾಗಿಲ್ಲ: ಈಗ ಹೆಚ್ಚು ಮಾಡಿರತಕ್ಕ ಶುಲ್ಕವನ್ನು ಕಿತ್ತುಹಾಕಿದರೆ ಇದನ್ನು ಸರಿಗಟ್ಟಿಕೊಳ್ಳಲು ಅಷ್ಟು ಭಾರಿ ಹಣ ಬೇಕೇನು! ಇತ್ತ ಹಣಕಾಸಿನ ಸಚಿವರಾದರೋ ನಾವು ದಿವಾಳಿಯಾಗತಕ್ಕ ಸ್ಥಿತಿಯಲ್ಲಿದ್ದೇವೆ ಎಂದು ಬಹಳ ದಿವಸ ಗಳಿಂದಲೂ ಹೇಳುತ್ತಲೇ ಇದ್ದಾರೆ. ಆದಕಾರಣ ನಾವೀಗ ಈ ಡಬ್ಬರ್ ಫೀಜನ್ನು ಕಿತ್ತುಹಾಕಿದ ಮೇಲೆ ನಾವು ಮುಂದೆ ಇದನ್ನು ಹೇಗೆ ಸರಿದೂಗಿಸಬೇಕೆಂಬುದನ್ನು ಆಲೋಚನೆ ಮಾಡಬೇಕಾಗಿದೆ. ಈ ರಾಜ್ಯದಲ್ಲಿ ನನಗೇನೊಂದು ಅರ್ಥವಾಗುತ್ತಿಲ್ಲ ಎಂದರೆ: ನಮ್ಮ ಸಭಾ ನಾಯಕರಿಗೆ ರಾಷ್ಟ್ರ ದಾದ್ಯಂತವೂ ಇಷ್ಟೊಂದು ದೊಡ್ಡ ವ್ಯಕ್ತಿತ್ವವಿದೆ. ಅವರೇಕೆ ಇಂಥಾ ಮಣ್ಣು ತಿನ್ನುವ ಕೆಲಸಕ್ಕೆ ಮನಸ್ಸನ್ನು ಕೊಡುತ್ತಿದ್ದಾರೆಂದು ನನಗೆ ಬಹಳ ಖೇದವಾಗುತ್ತಿದೆ, ಈ ಬಡ ತಾಯಿ ತಂದೆಗಳ ಮಕ್ಕಳು ಈ ಘಟ್ಟಕ್ಕೆ ಬರಲು ಏಕೆ ಅವಕಾಶ ಕೊಟ್ಟರು ಎಂಬುದನ್ನು ವಿಚಾರವಂತರು ಆಲೋಚನೆ ಮಾಡಬೇಕಾದ ವಿಷಯ ಇದು. ನಮ್ಮ ದೇಶದಲ್ಲಿ ಇಂಥಾ ತುರ್ತು ಪರಿಸ್ಥಿತಿ ಇರತಕ್ಕ ಈ ಪರ್ವ ಕಾಲ ದಲ್ಲಿ ಇದನ್ನು ಹೀಗೇ ಬಿಟ್ಟುಕೊಂಡು ಬಂದರೆ ಇದನ್ನು ಮುಂದೆ ಇಳಿಸುವುದಕ್ಕೆ ಆ ದೇವರಿಗೂ ಸಹಾ ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಅನಂತರ ಅವರು ಎಷ್ಟೇ ದೊಡ್ಡವರಾಗಿದ್ದರೂ ಇದನ್ನು ಕಳಗಿಳಿ ಸಲು ಸಾಧ್ಯವಿಲ್ಲ. ಆದರೆ ನಾನು ವಿದ್ಯಾ ಮಂತ್ರಿಗಳು ಕೆಟ್ಟವರು ಎಂದು ಹೇಳುವುದಿಲ್ಲ. ಇದು ಒಂದು ಸಾಮೂಹಿಕ ಜವಾಬ್ದಾರಿಯ ಕೆಲಸ. ಆಗಲೆ ಶ್ರೀ ಮುಕ್ಕಣ್ಣಪ್ಪನವರು ಹೇಳಿದ ಹಾಗೆ ಇದಕ್ಕೆ ಐದು ಲಕ್ಷವಲ್ಲ ಹತ್ತು ಲಕ್ಷವಾಗಲೀ ಸರ್ಕಾರದವರು ಹಿಂದೆಗೆಯಬಾರದು. ಮೊದಲು ಆ ಶರಾವತಿ ವ್ಯಾಲಿಯಲ್ಲಿ ನಲವತ್ತು ಕೋಟಿ ಖರ್ಚಾಗುತ್ತೆಂದು ಹೇಳುತ್ತಿದ್ದರು. ಆದರೆ ಈ ದಿವಸ ಅದು 120 ಕೋಟಿಗೇರಿದೆ. ಹೀಗೆ ಇಲ್ಲಿ ಕೋಟಿಗೆ ಕೋಟಿ ರೂಪಾಯಿಗಳೇ ಹೋಗುತ್ತಿರುವಾಗ ಇಷ್ಟು ಜುಜುಬಿ ಹಣಕ್ಕೇಕೆ ಇವರು ಹಿಂದೆಗೆಯಬೇಕು! ಇಡೀ ಪ್ರಪಂಚದಲ್ಲಿ ಎಲ್ಲ ಧನಕ್ಕಿಂತಲೂ ಮಿಗಿಲಾದ ಧನ ಎಂದರೆ ಅದು ಈ ವಿದ್ಯಾ ಧನವೇ. ಮೈಸೂರಿನಲ್ಲಿ ಅಂಥಾ ಶ್ರೀಮಂತರಿಲ್ಲ. ಮೈಸೂರಿನವರಿಗೆ ವಿದ್ಯೆಯೇ ದೊಡ್ಡ ಸಂಪತ್ತು. ಅದಕ್ಕೆ ಈ ದಿವಸ ಕೊಡಲ ಪೆಟ್ಟನ್ನು ಹಾಕಲು ಹೊರಟಿದ್ದಾರೆ. ಖಂಡಿತ ಇದು ಸರಿಯಾದ್ದಲ್ಲ. ಈ ಸಿಚುಯೇಷನ್ನನ್ನು ಈ ಮಟಕ್ಕೆ ಬಿಟ್ಟಿದ್ದು ಮೊದಲನೆಯ ತಪ್ಪು. ಈಗಲೂ ಸಬೂಬು ಹೇಳುವುದಕ್ಕೆ ಹೊರಟರೆ ಇದು ಎಲ್ಲರ ಕೈಮೀಂಚಿ ಹೋಗ ಬಹುದು. ಅಷ್ಟಕ್ಕೆಲ್ಲಾ ಅವಕಾಶವಾಗದಂತೆ ಇದನ್ನು ತಡೆಗಟ್ಟಬೇಕೆಂದು ಹೇಳುತ್ತೇನೆ. ಆದರೆ ನಾನೀಗ ಹೇಳುವುದಿಷ್ಟೆ: ಇದನ್ನು ಕಳಕಳಿಯಿಂದ ಹೇಳುತ್ತಿದ್ದೇನೆ: ಬರೀ ಬುದ್ಧಿವಂತಿಕೆಯ ಮಾತುಗಳನ್ನು ಆಡುವುದಕ್ಕೆ ಹೊರಟರೆ ಇದರಿಂದ ಯಾರಿಗೂ ಮರ್ಯಾದೆ ಬರುವುದಿಲ್ಲ; ಘನತೆ ಉಳಿಯುವುದಿಲ್ಲ. ಆದುದರಿಂದ ವಿದ್ಯಾರ್ಥಿಗಳ ಬೇಡಿಕೆಯೇನಿದೆ ಅದನ್ನು ಈಡೇರಿಸುವುದಾಗಿ ಮತ್ತು ಅವರು ಕೇಳಿರುವುದಕ್ಕಿಂತಲೂ ಹೆಚ್ಚಿಗೆ ಅನುಕೂಲಗಳನ್ನು ಕೊಡಲು ಮಾನ್ಯ ಮುಖ್ಯಮಂತ್ರಿ ಗಳು ಆಶ್ವಾಸನವನ್ನು ನೀಡಿ, ಆ ಕೀರ್ತಿಗೆ ಅವರು ಭಾಗಿಗಳಾಗಬೇಕೆಂದು ಹೇಳಿ ನನಗೆ ಈ ನಾಲ್ಕು ಮಾತುಗಳನ್ನಾಡುವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೇ, ವಿದ್ಯಾ ಕ್ಷೇತ್ರದಲ್ಲಿ ಸಾಧಾರಣವಾದ ಸಮಸ್ಯೆಗಳು ಆದಷ್ಟು ಕಡಿಮೆಯಾಗಿರಬೇಕು ಎನ್ನುವುದನ್ನು ನಾವೆಲ್ಲ ಒಪ್ಪತಕ್ಕ ವಿಚಾರ ದುರ ದೃಷ್ಟದಿಂದ ನಮ್ಮ ಮೈಸೂರು ರಾಜ್ಯದ ವಿದ್ಯಾಭ್ಯಾಸದ ಇಲಾಖೆಯಲ್ಲಿ ಇತ್ತೀಚೆಗೆ ಕಳೆದ ಒಂದೂವರೆ ವರ್ಷಗಳಿಂದ ಸಮಸ್ಯೆಗಳು ಉಲ್ಬಣಾವಸ್ಥೆಗೆ ಹೋಗುತ್ತಿರುವುದನ್ನು ನಾವೆಲ್ಲರೂ ಬಹಳ ವ್ಯಸನದಿಂದ ನೋಡಬೇಕಾಗಿದೆ. ಬೆಂಗಳೂರಿನಲ್ಲಿ ವಿದ್ಯಾರ್ಥಿಗಳ ಮುಷ್ಕರ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಪಾಧ್ಯಾಯರುಗಳ ಮುಷ್ಕರ, ಹುಬ್ಬಳ್ಳಿಯ ಶಾಲೆಗಳಲ್ಲಿ ಮುಷ್ಕರ, ಹೀಗೆ ಎಲ್ಲೆಲ್ಲೂ ಕೂಡ ಮುಷ್ಕರದ ಕೂಗುಗಳು, ಮುಷ್ಕರದ ಬೆದರಿಕೆಗಳು ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಬರುತ್ತಾ ಇರತಕ್ಕದ್ದನ್ನು ನೋಡಿದರೆ ನಮ್ಮ ವಿದ್ಯಾಭ್ಯಾಸದ ಇಲಾಖೆಯ ಮುಖ್ಯ ಅಧಿಕಾರವನ್ನು ಪಡೆದಿರ ತಕ್ಕ ಜನರ ಬಗ್ಗೆ ನಮಗೆ ಕಠಿಣತೆ ಅಸಮಾಧಾನ ದಿನೇ ದಿನೇ ಉಂಟಾಗುತ್ತಿದೆ. ನಾವೆಲ್ಲರೂ ಕೂಡ ಏನೇ ನಮ್ಮ ಭಿನ್ನಾಭಿಪ್ರಾಯಗಳಿರಲಿ ವಿದ್ಯಾಭ್ಯಾಸದ ವಿಚಾರದಲ್ಲಿ ಮಾತ್ರ ಭಿನ್ನಾಭಿಪ್ರಾಯ ಗಳನ್ನು ಕಡಿಮೆ ಮಾಡಬೇಕು ಎನ್ನುವ ಮನೋಭಾವನೆಗಳನ್ನು ನಾವು ಆಗಿಂದಾಗ್ಗೆ ವ್ಯಕ್ತ ಪಡಿಸುತ್ತಲೇ ಬಂದಿದ್ದೇವೆ. ಸುಮಾರು ನಲವತ್ತು ನಿಮಿಷಗಳ ಕಾಲ ನಾವು ಈ ಸಭೆಯ ಕಾರ್ಯ ಕಲಾಪಗಳನ್ನು ಅರ್ಧಗಂಟೆಯ ಕಾಲ ಮುಂದೆ ಹಾಕಿದೆವು. ಇದಕ್ಕೆ ಕಾರಣವಾದರೂ ಮಾನ್ಯ ವಿದ್ಯಾಸಚಿವರು, ಯಾವ ಒಂದು ವಿದ್ಯಾರ್ಥಿಗಳ ನಿಯೋಗ ಈ ಸಭೆಯ ಬಳಿಗೆ ಬಂದು ಈ ಮುಷ್ಕರದ ಬಗ್ಗೆ ಏನು ಸರಕಾರದವರು ಆಜ್ಞೆ ಮಾಡಿದ್ದಾರೆ, ಆ ಆಜ್ಞೆಯಿಂದ ವಿದ್ಯಾರ್ಥಿಗಳಿಗೆ ಮತ್ತು ಅವರ ತಂದೆ ತಾಯಿಗಳಿಗೆ ಹಾಗೂ ಪೋಷಕರಿಗೆ ಉಂಟಾಗಿರತಕ್ಕ ಅನಾನುಕೂಲಗಳ ಬಗ್ಗೆ ವಿದ್ಯಾರ್ಥಿಗಳ ನಿಯೋಗದ ಜನರೊಡನೆ ಮಾತನಾಡಲಿ ಎಂದು ಈ ಸಭೆಯ ಬಹು ಬೆಲೆಬಾಳತಕ್ಕ ಕಾಲವನ್ನು ನಾವು ಅವರಿಗೆ ಕೊಟ್ಟೆವು. ಆದರೆ ಅಲ್ಲಿ ನಡೆದದ್ದು ಏನು ಎನ್ನುವುದನ್ನು ಈಗ ಯೋಚನೆ ಮಾಡ ಬೇಕಾಗಿದೆ. ಇಲ್ಲಿ ಬಂದಿದ್ದಂತಹ ವಿದ್ಯಾರ್ಥಿಗಳ ನಿಯೋಗಕ್ಕೆ ಮಾನ್ಯ ವಿದ್ಯಾ ಸಚಿವರ ನೇರವಾದ ಉತ್ತರ ದೊರಕಲಿಲ್ಲ. ಅವರೊಡನೆ ಸರಿಯಾಗಿ ಮಾತುಕತೆಗಳೂ ನಡೆಯಲಿಲ್ಲ ಎಂದು ಅವರಿಂದ ತಿಳಿಯುತ್ತದೆ. ಇಲ್ಲಿ ಬಂದಂತಹ ನಿಯೋಗ ಸಂಪೂರ್ಣ ಅಸಮಾಧಾನವಾಗಿ ಅಸಂತೋಷವಾಗಿ ಅವರು ಏನು ವಿಚಾರಗಳನ್ನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಹಾಗೂ ವಿದ್ಯಾ ಮಂತ್ರಿಗಳಲ್ಲಿ ತಿಳಿಯುವಂತೆ ಮನದಟ್ಟು ಮಾಡಬೇಕೆಂದು ಬಂದಿದ್ದಾರೋ ಅದನ್ನು ಮಾಡುವುದಕ್ಕೆ ವಿದ್ಯಾಮಂತ್ರಿ ಗಳು ಅವಕಾಶ ಕೊಡಲಿಲ್ಲ ಎಂದು ನಾನು ತಿಳಿಯುತ್ತೇನೆ. ಇದು ಒಳ್ಳೆಯದಲ್ಲ.

† ಶ್ರೀ ಎಸ್. ಆರ್. ಕಂಠಿ.—ಅವರುಗಳು ನನ್ನ ಕಡೆಗೆ ಬಂದಿದ್ದರು ನಾಲ್ಕು ನಿಮಿಷಗಳ ಕಾಲ ನನ್ನೊಡನೆ ಕೆಲವು ಮಾತುಗಳನ್ನು ಹೇಳಿದರು ಮತ್ತು ಅವರು ಕೊಟ್ಟ ಮೆಮೊರ್ಯಾಂಡಂನ್ನು ಪಡೆದಿದ್ದೇನೆ ಮತ್ತು ಅದನ್ನು ಕ್ಯಾಬಿನೆಟ್ಟಿನ ಮುಂದೆ ಇಡುತ್ತೇನೆ ಎಂದು ಅವರಿಗೆ ಹೇಳಿದೆ. ಯಾವಾಗಲೂ ಒಂದು ನಿರ್ಣಯ ಮಾಡುವಾಗ ಅದು ಕ್ಯಾಬಿನೆಟ್ಟಿನ ಮುಂದೆ ಬಂದು ಅದು ಎಲ್ಲರೂ ವಿಚಾರಮಾಡಿ ಒಂದು ತೀರ್ಮಾನಕ್ಕೆ ಬರುವಂತಹುದು. ಎಜುಕೇಷನ್ ಮಿನಿಸ್ಟರು ಒಬ್ಬರೇ ಏನು ಮಾಡುತ್ತಾರೆ. ಇದರಲ್ಲಿ ತಪ್ಪು ತಿಳಿದು ಮಾತನಾಡುತ್ತಾರೋ ಏನೋ ನನಗೆ ಗೊತ್ತಿಲ್ಲ. ಕ್ಯಾಬಿನೆಟ್ಟಿನಲ್ಲಿ ಮಾಡಿದಂತಹ ನಿರ್ಣಯ ಒಬ್ಬರದಲ್ಲ. ಅಲ್ಲಿ ಹದಿನೈದು ಜನ ಮಿನಿಸ್ಟರು ಇದ್ದಾರೆ ಎನ್ನುವುದನ್ನು ತಮಗೆ ತಿಳಿಯಪಡಿಸುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಸಂತೋಷ. ಸಂಪುಟದ ಸರ್ಕಾರದಲ್ಲಿ ಎಲ್ಲ ಜನರನ್ನು ಇದಕ್ಕೆ ಜವಾಬುದಾರರನ್ನಾಗಿ ಮಾಡುವುದಕ್ಕೆ ಇದು ಒಂದು ಅನುಕೂಲವಾದ ವಿಚಾರ. ನಾನು ಹೇಳತಕ್ಕದ್ದು ಕೇವಲ ವಿದ್ಯಾ ಮಂತ್ರಿಗಳು ಒಬ್ಬರೇ ವಿಚಾರಮಾಡಿಲ್ಲ ಎನ್ನುವುದಿಲ್ಲ. ಇಂತಹ ಮಹತ್ವಪೂರಿತವಾದ ನಿರ್ಣಯಗಳನ್ನು ಮಾಡತಕ್ಕದ್ದು ಸಚಿವ ಸಂಪುಟದ ಮೂಲ ಕರ್ತವ್ಯ. ಆ ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು ಸಚಿವ ಸಂಪುಟದಲ್ಲಿ ವಿದ್ಯಾ ಸಚಿವರ ಹೊಣೆಯನ್ನು ನೇರವಾಗಿ ಜವಾಬುದಾರಿ ಹೊತ್ತಿರುವವರು ನೀವೆ ಎನ್ನುವುದನ್ನು ನಾವೆಲ್ಲರೂ ಬಲ್ಲೆವು. ಅದರಲ್ಲೂ ವಿದ್ಯಾ ಶಾಖೆಯ ಹೊಣೆಯನ್ನು ಹೊತ್ತಿರುವ ವಿದ್ಯಾ ಮಂತ್ರಿಗಳಾದವರು ಸಚಿವ ಸಂಪುಟದಮೇಲೆ ಎಲ್ಲ ವ್ಯವಹಾರಗಳನ್ನು ಇಟ್ಟಿದ್ದೇವೆ ಎಂದು ಆಡತಕ್ಕದ್ದು ಸಾಧುವಲ್ಲ, ಆದರೆ ಸಚಿವ ಸಂಪುಟದಮೇಲೆ ವಿದ್ಯಾ ಸಚಿವರ ಜವಾಬುದಾರಿಯೂ ಇದೆ. ವಿದ್ಯಾ ಸಚಿವರು ಈ ರೀತಿ ತಮ್ಮ ಹೊಣೆಯನ್ನು ಬೇರೆಯವರಮೇಲೆ ಹೊರಿಸುವುದು ಸರಿಯಲ್ಲ. ಈ ರೀತಿಯ ವರ್ತನೆ ತುಂಬಾ ಶೋಚನೀಯ.

ಶ್ರೀ ಎಸ್. ಆರ್. ಕಂಠಿ.—ನ್ಯಾಯವಾಗಿಯೇ ಎಲ್ಲರೊಡನೆ ಇವೆಲ್ಲವನ್ನೂ ಕೂಲಂಕಷವಾಗಿ ವಿಚಾರ ಮಾಡಿ, ನಿರ್ಣಯ ಮಾಡಿದ್ದಾರೆ. ಇದನ್ನು ತಾವು Twist ಮಾಡುವುದಕ್ಕೆ ಪ್ರಯತ್ನ ಮಾಡು ವುದು ಸರಿಯಲ್ಲ.

4 P.M.

ಶ್ರೀ ಎಸ್. ಎಂ. ಕೃಷ್ಣ.—ಸಂಪುಟದಲ್ಲಿರುವವರೆಲ್ಲ ಜಾಣರೇ. ಅದರಿಂದಲೇ ನಿಮ್ಮನ್ನೂ ಮಂತ್ರಿಗಳಾಗಿ ಮಾಡಿರುವುದು. ಈ ಫೀ ಕನ್ಸೆಷನ್ನನ್ನು ಇಳಿಸತಕ್ಕ ನೀತಿಯ ಬಗ್ಗೆ ಏಕೆ ಎಂದರೆ ನ್ಯಾಯ ಅನ್ಯಾಯಗಳ ಪ್ರಶ್ನೆಯ ವಿವೇಚನೆ ಇದೆ. ಹಿಂದೆ ಇದೇ ಸಭೆಯಲ್ಲಿ ಇದೇ ವಿದ್ಯಾ ಮಂತ್ರಿಗಳು ನಮ್ಮ ರಾಜ್ಯದಲ್ಲಿ ಉತ್ತರದ ಪ್ರದೇಶಗಳಲ್ಲಿ ಹಳೆಯ ಮೈಸೂರಿನ ಭಾಗದಲ್ಲಿರುವುದಕ್ಕಿಂತ ಫೀಸುಗಳು ಜಾಸ್ತಿ ಎಂದು ಹೇಳಿ ಅದನ್ನು ಏಕರೂಪತೆ ಮಾಡಬೇಕು, ಆದುದರಿಂದ ನಮ್ಮ ಹಳೆಯ ಮೈಸೂರಿನ ವಿದ್ಯಾರ್ಥಿಗಳೂ ಫೀಜನ್ನು ಜಾಸ್ತಿ ಕೊಡಬೇಕೆಂದು ಹೆಚ್ಚು ಮಾಡಿದರು. ಇವೊತ್ತು ಇದೇ ವಿದ್ಯಾ ಮಂತ್ರಿಗಳು ಇದೇ ಮನೆಯಲ್ಲಿ ನಮ್ಮ ಮುಂದೆ ಬಂದು ಕರ್ನಾಟಕದ ವಿದ್ಯಾರ್ಥಿಗಳಿಗೆ ದೊರೆಯುತ್ತಿರುವ ಫ್ರೀಷಿಪುಗಳನ್ನು ಆಫ್ ಫ್ರೀಷಿಪುಗಳು, ಕಡಮೆ ಮಟ್ಟದಲ್ಲಿವೆ. ಆದುದರಿಂದ ಏಕರೂಪತೆಯನ್ನು ಸಾಧಿಸುವುದಕ್ಕೋಸ್ಕರ ಸಂಸ್ಥಾನವೆಲ್ಲೆಲ್ಲಾ ನಾವು ದಾಮಾಷಾ ಪ್ರಕಾರ ಇವುಗಳನ್ನು ಇಳಿಸಲೇಬೇಕು ಎನ್ನುವ ವಾದವನ್ನು ನಮ್ಮ ಮುಂದೆ ಇಲ್ಲಿ ಇಟ್ಟಿದ್ದಾರೆ. ಇದು ಪ್ರಗತಿಗಾಮಿ ನೀತಿಯೋ ಪುರೋಗಾಮಿ ನೀತಿಯೋ ಎನ್ನುವುದನ್ನು ನಾವು ವಿವೇಚನೆ ಮಾಡಿದರೆ ವಿದ್ಯಾರ್ಥಿಗಳ ವಿಷಯದಲ್ಲಿ ವಿವಾದ ರಹಿತವಾದವುಗಳನ್ನು ನೀವೇಕೆ ಏಕರೂಪತೆಯೆಂದು ಹೇಳಿಕೊಂಡು ನ್ಯಾಯ ಧರ್ಮ ನೀತಿಗಳನ್ನು ಗಾಳಿಗೆ ತೂರಿಸಿ ಹೊರಟಿರತಕ್ಕ ಸಾಹಸದ ಹೃದಯದಿಂದ ಮಾಡಿದ್ದೀರಿ. ಮಾನ್ಯ ವಿದ್ಯಾ ಮಂತ್ರಿಗಳ ಹೃದಯ ವಿದ್ಯಾರ್ಥಿಗಳ ಬಗ್ಗೆ ಹೇಗಿದೆ ಅವರ ಹೃದಯ ಎಷ್ಟು ಕಠಿಣವಾಗಿದೆ ವಿದ್ಯಾರ್ಥಿಗಳ ಬಗ್ಗೆ ಎನ್ನುವುದಕ್ಕೆ ಬೇಕಾದರೆ ರೆಫರಂಡಂ ತೆಗೆದುಕೊಳ್ಳಬಹುದು. I give you the benent of doubt that you have one. ಸಹಸ್ರಾರು ಜನ ವಿದ್ಯಾರ್ಥಿಗಳು ಎಲ್ಲ ಕಡೆಯಲ್ಲಿಯೂ ನಿಮ್ಮ ಬಗ್ಗೆ ಏನು ಘೋಷಣೆಗಳನ್ನು ಮಾಡುತ್ತಿದ್ದಾರೆ ಎನ್ನುವುದಕ್ಕೆ ನಿಮ್ಮ ಸಿ. ಐ. ಡಿ. ಮೂಲಕ ವರದಿಗಳನ್ನು ತರಿಸಿಕೊಂಡರೆ ನಿಮಗೇ ಎಲ್ಲ ವಿಷಯಗಳೂ ತಿಳಿಯುತ್ತವೆ. ತಾವೇ ಸಹಸ್ರಾರು ಜನಕ್ಕೆ ಅವರ ವಿದ್ಯಾಭ್ಯಾಸದ ಅಭಿವೃದ್ಧಿಗೆ ಕಲ್ಲು ಹಾಕಿದರೆ ಅದರಿಂದ ದೇಶಕ್ಕೆ ಉತ್ತರೋತ್ತರ ಒಳ್ಳೆಯದಾಗುವುದಿಲ್ಲ. ನೀವು ಹಿಂದೆ ಒಂದು ಹೇಳಿಕೆಯಲ್ಲಿ ತಿಳಿಸಿದ್ದೀರಿ ನಾವು ಫೀಜನ್ನು ಏರಿಸುತ್ತಿದ್ದೇವೆ. ಆದರೆ 2400 ರೂಪಾಯಿಗಳ ಕೆಳಗೆ ವರಮಾನವಿರುವವರು ಏನೂ ಫೀಜನ್ನು ಕೊಡಬೇಕಾಗಿಲ್ಲ. ಇದರಿಂದ ಸರ್ಕಾರಕ್ಕೆ ಐದಾರು ಲಕ್ಷ ರೂಪಾಯಿಗಳಷ್ಟು ನಷ್ಟವಾಗುತ್ತಿದೆ ಎಂದರು. ಇದೇನು ವ್ಯಾಪಾರ ಮಾಡುವುದಕ್ಕೆ ಇದರಲ್ಲಿ ಲಾಭ ನಷ್ಟದ ತಃಖ್ತೆ ತಯಾರಿಸುವುದಕ್ಕೆ ವಿದ್ಯಾ ಮಂತ್ರಿಗಳಾಗಿ ಪದವಿಯನ್ನು ಪಡೆದಿದ್ದೀರಾ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಹಿಂದೆ ಒಂದು ಪ್ರಶ್ನೆ ಇಲ್ಲಿ ಬಂದಾಗ ನಾಲ್ಕು ಲಕ್ಷದಿಂದ ಇಪ್ಪತ್ತು ಲಕ್ಷದವರೆಗೆ ಖರ್ಚು ಏಕೆ ಹೆಚ್ಚಾಯಿತು ಎಂದು ಕೇಳಿದುದಕ್ಕೆ ಮುಖ್ಯಮಂತ್ರಿಗಳು ದೊಡ್ಡ ಯೋಜನೆಗೆಂದು ನೂರಾರು ಕೋಟಿಗಳಷ್ಟು ದುಡ್ಡನ್ನು ಖರ್ಚು ಮಾಡುತ್ತಿರುವಾಗ ಅದರಲ್ಲಿ ಒಂದು ನಲವತ್ತು ಲಕ್ಷದಷ್ಟು ಜಾಸ್ತಿಯಾದರೆ ಪರವಾಗಿಲ್ಲ ಎನ್ನುವ ಉದಾರ ಭಾವನೆಯಿಂದ ಹೇಳಿದರು. ಅದೇ ಉದಾರ ಮನೋಭಾವನೆಯನ್ನು ಬಡಮಕ್ಕಳಮೇಲೆ ತೋರಿಸಬಾರದೇಕೆ? ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ನಲವತ್ತು ಲಕ್ಷದಿಂದ ನಾಲ್ಕು ಕೋಟಿಯವರೆಗೆ ರಾಜ್ಯದ ಸಂಪತ್ತು ನೀರಿನ ಹಾಗೆ ಶರಾವತಿ ಹಾಗೂ ಬಾಕ್ರಾ ನಾಂಗಲ್ ಯೋಜನೆಗಳಿಗಾಗಿ ವೆಚ್ಚಮಾಡುತ್ತಿದ್ದೇವೆಂದು ಚುನಾವಣೆಗಳಲ್ಲಿ ಭಾಷಣ ಮಾಡುತ್ತಾರೆ. ನಾಳಿನ ಭಾರತದ ಸತ್ಪ್ರಜೆಗಳಾಗುವವರಿಗೆ ವಿದ್ಯಾಭಿವೃದ್ಧಿಗೆ ನಿರ್ಬಂಧಗಳನ್ನು ಮಾಡತಕ್ಕಂತಹ ವಿದ್ಯಾ ಮಂತ್ರಿಗಳು ನಮ್ಮ ದೇಶದ ನಾಯಕರಾದವರಿಗೆ ಸರಿಯಾದ ಮಾರ್ಗದಲ್ಲಿ ಹಾದು ಹೋಗುವಂತೆ ಹೇಳುವ ಸಾಹಸವನ್ನು ಮಾಡುವ ಈ ಕಾಲದಲ್ಲಿ ವಿದ್ಯಾಭ್ಯಾಸದ ವಿಷಯದಲ್ಲಿ ಮಾನ್ಯ ಮಂತ್ರಿಗಳು ಈ ಶೆಟ್ಟರ ಮನೋಭಾವನೆಯನ್ನು ಬಿಡಬೇಕಾಗಿದೆ ಎಂದು ಇದನ್ನು ನಾನು ಇಲ್ಲಿ ವ್ಯಸನದಿಂದ ಹೇಳಬೇಕಾಗಿದೆ. ಇಂತಹ ಮನೋಭಾವನೆಯುಳ್ಳಂತಹವರು ಯಾವ ದೇಶದ ವಿದ್ಯಾಮಂತ್ರಿಗಳಾಗಿರಲಿ ಅವರಿಗೆ ಒಳ್ಳೆಯದಾಗುವುದಿಲ್ಲ. ವಿದ್ಯಾ ಮಂತ್ರಿಗಳು ಇದರಲ್ಲೇನಿಲ್ಲ ಎಂದು ಹೇಳುವುದಕ್ಕೆ ಬದಲಾಗಿ ಪರಿಪೂರ್ಣವಾದ ನಿಲುವನ್ನು ಕಳೆದು ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ಮೇಲಿಂದ ಮೇಲೆ ಅದಕ್ಕೆ ತಕ್ಕ ಹಾಗೆ ನೋಡಿಕೊಳ್ಳಬೇಕೆಂದು ಹೇಳುತ್ತಲೇ ಇದ್ದೇವೆ. ಹಳೆಯ ಮೈಸೂರಿನಲ್ಲಿ ನಿಮ್ಮ ಕಾರ್ಯಗಳನ್ನು ನಿಮ್ಮ ಹೇಳಿಕೆಗಳನ್ನು ಹೊಸ ಮೈಸೂರಿನ ಭಾಗಗಳಂತೆ ಅದರ ಜೊತೆಯಲ್ಲಿ ತೆಗೆದುಕೊಂಡು ಹೋಗುವಂತಹ ವಾತಾವರಣವನ್ನು ಕಲಿತು ಕೊಂಡಿದ್ದಾರೆ. ನೀವು ಹಳೆಯ ಮೈಸೂರಿನ ಬಗ್ಗೆ ಮಲತಾಯಿಯ ಭಾವನೆ ಹೊಂದಿದ್ದೀರಿ ಎನ್ನುವುದು ಸರ್ವೇಸಾಧಾರಣವಾದ ಮಾತು ಎನ್ನುವುದು ಜನಜನಿತವಾಗಿದೆ ಎಂದು ಒಂದಲ್ಲ ಹತ್ತು ಬಾರಿ ನೀವು ಹಳೆಯ ಮೈಸೂರಿನ ಪ್ರದೇಶದಿಂದ ಈ ಶಾಸನ ಸಭೆಯಲ್ಲಿ ಪ್ರತಿನಿಧಿಸತಕ್ಕ ಜನ ಸಾರಿ ಸಾರಿ ಹೇಳುತ್ತಿದ್ದಾರೆ. ನೀವು ನಿಮ್ಮ ಎಲ್ಲಾ ಕಾನೂನುಗಳಿಂದ ನಿಮ್ಮ ಹೇಳಿಕೆಗಳಿಂದ ನಿಮ್ಮ ಗೌರವವನ್ನು ಕಳೆದುಕೊಂಡಿದ್ದೀರಿ.

(ಶ್ರೀ ಎಸ್. ಎಂ. ಕೃಷ್ಣ)

ನೀವು ನಮ್ಮ ರಾಜ್ಯಕ್ಕೆ ವರವಾಗುವುದರ ಬದಲು ಶಾಪವಾಗಿ ಪರಿಣಮಿಸಿದ್ದೀರಿ ಎಂದು ನಾನು ವ್ಯಸನದಿಂದ ಹೇಳಬೇಕಾಗಿದೆ. ವಿದ್ಯಾಭ್ಯಾಸದ ಅಭಿವೃದ್ಧಿಗೆ ಒಂದು ದೊಡ್ಡ ಅಪಘಾತವನ್ನು ತಂದು ಒಡ್ಡಿದ್ದೀರಿ. ರೆಫರೆಂಡಮ್ ತೆಗೆದುಕೊಳ್ಳಬಹುದು; ನಿಮ್ಮ ವಿಷಯದಲ್ಲಿ ಹಳೇ ಮೈಸೂರಿನಲ್ಲಿ. ಆದ್ದರಿಂದ ನಾವು ಇವತ್ತು ನಾವು ಬಹಳ ದೂರ ದೃಷ್ಟಿಯಿಂದ ಕೂಡಿರುವ ಒಂದು ನೀತಿಯನ್ನು ನಮ್ಮ ರಾಜ್ಯದಲ್ಲಿ ಹಾಕಿಕೊಳ್ಳಬೇಕು. ಅಂಥ ಒಂದು ವಿದ್ಯಾನೀತಿಯನ್ನು ನಿಮ್ಮಿಂದ ನಿರೀಕ್ಷಿಸುವುದು ಸಾಧ್ಯವೆ ಎಂಬ ಒಂದು ದೊಡ್ಡ ಸಮಸ್ಯೆ ಒದಗಿ ಬಂದಿದೆ. ವಿದ್ಯಾರ್ಥಿಗಳಿಗೆ ಯಾವುದಾದರೂ ಒಂದು ರೀತಿಯ ಪರಿಹಾರವನ್ನು ಕೊಡಲೇ ಬೇಕಾಗಿದೆ, ಆ ಪರಿಹಾರವನ್ನು ಕೊಟ್ಟರೆ ನಮ್ಮ ರಾಜ್ಯಕ್ಕೆ 40 ಲಕ್ಷ ರೂಪಾಯಿಗಳು ಉಳಿಯುವುದು ಹೋಗುತ್ತೆ ಎಂತ ಹೇಳು ಹೇಳುತ್ತಾರೆ. ಆದರೆ ಅದರಿಂದ ಆಗತಕ್ಕಂಥ ನಷ್ಟ, ಅದರಿಂದ ಆಗತಕ್ಕಂಥ ಅನರ್ಥ, ಅಪಘಾತವನ್ನು ಆಮೇಲೆ 40 ಕೋಟಿ ರೂಪಾಯಿ ಖರ್ಚು ಮಾಡಿದರೂ ಸರಿಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರ ಮತ್ತು ಸಚಿವ ಸಂಪುಟದವರು ಪುನರಾಲೋಚನೆ ಮಾಡಿ ನ್ಯಾಯವಾದ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಳುತ್ತಾರೆಂದು ನಂಬಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೆ, ಈಗ ನಡೆಯುತ್ತಾ ಇರುವುದು ನಿಜವಾಗಿಯೂ ಮನಸ್ಸಿಗೆ ಬಹಳ ಖೇದ ತರುತ್ತಾ ಇರುವ ವಿಚಾರ. ನಾನು ಮೊನ್ನೆ ಮೈಸೂರಿಗೆ ಹೋಗಿದ್ದೆ; ಆಗ ಹುಡುಗಿಯರು ಮತ್ತು ತಾಯಿಂದಿರು ನಾನು ಬರುವುದನ್ನೆ ಕಾದಿದ್ದು ಜೇನುನೊಣದಂತೆ ನನ್ನನ್ನು ಮುತ್ತಿಕೊಂಡರು; ಫೀ ವಿಚಾರದಲ್ಲಿ ಏನಾದರೂ ಮಾಡಿ ಪರಿಹಾರ ಕೊಡಿಸಬೇಕು ಎಂದು ನನ್ನ ಸುತ್ತುಗಟ್ಟಿದರು. ನಮ್ಮ ವಿದ್ಯಾ ಸಚಿವರ portfolio ದಲ್ಲಿ ಏನೂ ಮಾತನಾಡಬಾರದು, ಅವರಲ್ಲಿ ಏನನ್ನೂ ಕೇಳಬಾರದು ಎಂದು ಗಟ್ಟಿ ಮನಸ್ಸು ಮಾಡಿದ್ದೆ. ಇದು ಎಲ್ಲಾ ನೋಡಿದರೆ ಮಾತನಾಡದೆ ಏನು ಮಾಡುವುದು? ಈಗ ಮಾತನಾಡಬೇಕಾದ ಪರಿಸ್ಥಿತಿಗೆ ಬಂದು ಬಿಟ್ಟಿದೆ. ನಾನೂ women's college ಒಂದು ಸ್ಕಾಲರ್‌ಷಿಪ್ ಫ್ರೀಷಿಪ್ ಕಮಿಟಿಯಲ್ಲಿ ಇದ್ದೇನೆ. ನಾನು ಏನು ಮಾಡುವ ಹಾಗೆ ಇದೆ? ಮುಂಚೆ ಮಕ್ಕಳಿಗೆ ಸ್ಕಾಲರ್‌ಷಿಪ್ ಕೊಟ್ಟಾಗ ಅದರ ಜೊತೆಗೆ ಫ್ರೀಷಿಪ್ಪೂ ಸೇರಿಕೊಂಡು ಬರುತ್ತಿತ್ತು. ಹೋದ ವರ್ಷವೇ ಅವನ್ನು ಕಿತ್ತುಕೊಂಡು ಬಿಟ್ಟಿದ್ದಾರೆ. ಸ್ಕಾಲರ್‌ಷಿಪ್ ಕೊಟ್ಟವರಿಗೆ ಫ್ರೀಷಿಪ್ಪು ಕೊಡುವುದಿಲ್ಲ, ಅವರು ಫೀ ಕೊಡಬೇಕಾಗಿದೆ. ಅದನ್ನು ಹೋದಸಾರಿ ಅನುಷ್ಠಾನಕ್ಕೆ ತರುವುದಕ್ಕೆ ಎಷ್ಟೋ ಕಷ್ಟ ಪಟ್ಟೆವು. ಫ್ರೀಷಿಪ್ ಕೊಡುತ್ತಿದ್ದ ಮಕ್ಕಳಿಗೂ ಹುಡುಗಿಯರಿಗೂ ಈಗ ಅರ್ಧ ಅರ್ಧ ಕೊಟ್ಟು ಸಮಾಧಾನ ಮಾಡುತ್ತಿದ್ದೆವು. 10 ತಿಂಗಳ ಫೀ ಈಗ ಕೊಡಬೇಕೆಂದರೆ ಎಲ್ಲಾ ವಿದ್ಯಾರ್ಥಿಗಳಿಗೂ ಕೊಡುವುದಕ್ಕೆ ಸಾಧ್ಯವಿಲ್ಲ. ಬಡ ವಿದ್ಯಾರ್ಥಿಗಳಿಗೆ ಎಕ್ಸಾಮಿನೇಷನ್ನಿಗೆ ಹಣ ಕಟ್ಟುವುದಕ್ಕೆ ದುಡ್ಡೇ ಇಲ್ಲ. ಅಂತಹವರಲ್ಲಿ ವರ್ಷದ ಮಧ್ಯದಲ್ಲಿ ಫೀಯನ್ನೂ ಕೇಳಿದರೆ ಅವರು ಏನು ಮಾಡಬೇಕು, ಅವರು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವುದು ಹೇಗೆ? ಹೆಣ್ಣು ಮಕ್ಕಳಿಗೆ ಕಾಲೇಜಿಗೆ ಹೋಗಬೇಡಿ ಎಂದು ಸುಮ್ಮನೆ ಹೇಳಿಬಿಡಿ. ನೀವು ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುತ್ತಿದ್ದೇವೆ ಅಂತ ಹೇಳುವುದೆಲ್ಲ ಸುಳ್ಳು. ಅವರಿಗೆ ಮನೆಯಲ್ಲಿ ಅಡಿಗೆ ಮಾಡಿಕೊಂಡು ಇದ್ದುಬಿಡಿ ಎಂದು ಹೇಳಿಬಿಡಿ, ನಿಮಗೂ ಬಹಳ ಸರಾಗ, ಅನುಕೂಲವಾಗುತ್ತೆ. ಈಗ ಅದಕ್ಕೆ ಸಂಬಂಧಪಟ್ಟ ಆರ್ಡರಿನಿಂದ ಓದುತ್ತೇನೆ, ಅದು ಹೀಗಿದೆ:

> "By the reduction in the percentage of freeships it is possible that some freeship holders who were granted freeships in the previous years, may get it. In order that these freeship holders are not deprived of that benefit, how best these freeship holders are allowed to continue those freeships is under the consideration of the Government at present."

ಎಂದು ಹೇಳಿದ್ದಾರೆ. ಇದರ consideration ಏನು? ಯಾವಾಗ? ಎಲ್ಲ ಮುಗಿದ ಮೇಲೇ? ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡುತ್ತೇವೆ ಎಂಬ ಇವರ ಮಾತು ಸುಳ್ಳು. ಈ ತರಹ ನೀತಿ ಇದ್ದರೆ ನಾವು ಕಮಿಟಿ ಮೀಟಿಂಗುಗಳಲ್ಲಿ ಕೂತುಕೊಂಡು ಏನು ಡಿಸೈಡ್ ಮಾಡುವುದು, ಏನು ಕನ್ಸಿಡರ್ ಮಾಡುವುದು, ಯಾವ ತರಹ ಮಕ್ಕಳಿಗೆ ಅನುಕೂಲ ಮಾಡಿಕೊಡುವುದು. ಇವರ ನೀತಿಯ ಅರ್ಥ ಇವರಿಗೇ ಗೊತ್ತಾಗಬೇಕು ಇನ್ನಾರಿಗೆ ಗೊತ್ತಾಗುತ್ತಾ ಇಲ್ಲ. ಈ ತರಹ ಅನ್ಯಾಯ ಮಾಡುವುದಕ್ಕೆ ಬಡ ಈಗ ಕಾಲೇಜುಗಳಲ್ಲಿ [illegible], ನಿಮ್ಮ [illegible]ಕ್ಕೆ ಲಾಯಕ್ಕಲ್ಲ, ಮನೆಗೆ

ಹೊರಟು ಹೋಗಿ ಎಂದು ವಿದ್ಯಾರ್ಥಿಗಳಿಗೆ ಹೇಳಬಿಡಿ. ಈ ನೀತಿಯನ್ನು ಪುನಃ ವಿಮರ್ಶೆ ಮಾಡಬೇಕು. ಇಲ್ಲದಿದ್ದರೆ ಮುಂದಿನ ಪ್ರಜೆಗಳಿಗೆ ದ್ರೋಹ ಮಾಡಿದಂತೆ ಆಗುತ್ತದೆ.

ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri G. V. GOWDA (Palya).—Mr. Speaker Sir, the fact that you have been pleased to adjourn the House just to facilitate the Minister for Eduction to have negotiations with the student-community, in my opinion is a victory to the point raised by us. I will not be wrong if I say at least, it proves to be a moral victory and I hope that the Hon'ble Chief Minister would kindly revise the order and allow the *status-quo ante* to be maintained in this regard. Sir, in the name of uniformity anything could not be done. There are clear provisions in the States Reorganisation Act that the benefits that have accrued to one set of citizens should not be curtailed in the guise of seeking uniformity. So many students were getting concessions and in the name of uniformity, it cannot be curtailed. If they can afford it, they could enhance the facilities in other places where they were less. Sir, I know that provision applies to the services and officers of Government. But in my opinion, if you consider the spirit of the provision, it equally applies to the student-community or any riayat or to a man in the street. That is my point Sir. The Eduction Ministry appears to be under a misapprehension that the degree course should be classified as indepedent classes. In my opinion, take for instance, the Engineering course—all the four classes are to be treated as part of one degree course; and if a student is awarded scholarship or concession in the first year, that concession must be conceded to him in subsequent years if he maintains satisfactory progress in his study. There is no reason why that concession given to him in the first year should be curtailed in the subsequent year or years. In my opinson, that is a right accruing to the student and that must be allowed to continue. Otherwise, it amounts to an infringement of the right......

Mr. SPEAKER.—As a student continuing in the same class since 1956?

Sri G. V. GOWDA.—No Sir, when the student gets a concession in the first class, the same concession should be allowed to him in the second year, third, fourth years. In the hope that he has been awarded scholarship, he would take insterest in his studies. Such being the case, in the name of uniformity, curtailing that right, I must say, is an infringement of the right accruing to that particular student in the State. I have answered para 5. As my friend Sri S. M. Krishna said, though this is a decision of the Cabinet according to the Education Minister, he must place all the *pros and cons* in the matter before the Cabinet.

Mr. SPEAKER.—No repetitions in this Debate, Please.

Sri G. V. GOWDA.—Even the economic growth is not satisfactory. The *per capita* income is at a stand still. The student community in our State depend upon concessions for their education. Such being the case, no worthwhile reason has been adduced which must have compelled the Government to reduce the concessions that have been enjoyed by the

students so far. Even pointed reference was made by the Leader of the Opposition. Ways and means are being adopted which will completely defeat the process of emotional integration. Even in my opinion, I have reason to believe this discrimination and injustice is being done in the valuing of papers. When I see a student getting ranks in Dharwar or Belgaum, can I not expect the same efficiency in Mysore? When a student of the old Mysore area who was getting topmost places in the previous years, he does not get it today.

So it applies to a great extent to what we have cherished, namely, emotional integration. I do not know why the students in old Mysore could not get any rank. Therefore, I have reason to believe that even injustice is being done......

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಮಧ್ಯೆ ಬೇರೆ ವಿಷಯ ಮಾತನಾಡುತ್ತಿದ್ದಾರೆ. ಯಾವುದೇ ಪರೀಕ್ಷೆಯಲ್ಲಿ ಎಲ್ಲ ಕಡೆಯುವರೂ ಜನಗಳಿದ್ದಾರೆ, ಎಲ್ಲ ಕಡೆಯುವರೂ ಪರೀಕ್ಷೆ ತಪಾಸು ಮಾಡುವವರಿದ್ದಾರೆ. ಅದನ್ನು ಮಾತನಾಡಿದರೆ ಆಗುವುದಿಲ್ಲ. ಮಾನ್ಯ ಸದಸ್ಯರು ಎರಡನೆ ವಿಚಾರ ಮಾತನಾಡಿದರೆ ನಾನು ಉತ್ತರ ಕೊಡಬೇಕಾಗುತ್ತದೆ.

Mr. SPEAKER.—I uphold the objection that valuation of papers does not come under this debate.

Sri G. V. GOWDA.—This is the situation we are forced to see all over the State. Such things would not help to integrate the areas emotionally or in building up our State. Our *per capita* income has not improved. Our economic growth has not been appreciable. Even the Plan schemes have not given any yield. That is the reason why there should be more concessions to our student community. Reduction, in any way, I should say is unwarranted, ill-conceived and not justifiable under any circumstances. Such being the case, I request the Chief Minister to revise the decision and see that the *status quo* is maintained. I request once again the Chief Minister to raise to the occasion and see that justice is done to the student community.

† ಶ್ರೀ ಕೆ. ದೇವಯ್ಯ (ಮಲ್ಲೇಶ್ವರಂ).—ಸ್ವಾಮಿ, ಈ ದಿನದ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ. ನಮ್ಮ ವಿದ್ಯಾರ್ಥಿಗಳ ಕಷ್ಟ ಹೇಳಲಿಕ್ಕೆ ತೀರದು. ನಾನು ಒಂದು ಕಾಲೇಜಿನಲ್ಲಿ ಮತ್ತು ಹೈಸ್ಕೂಲಿನಲ್ಲಿ ಸ್ಕಾಲರ್‌ಷಿಪ್ ಕಮಿಟಿಯಲ್ಲಿ ಇದ್ದೇನೆ. ಸ್ಕಾಲರ್‌ಷಿಪ್ ಕೊಡಲು ಸರ್ಕಾರದವರು ಏನೊಂದು ದಾರಿ ಹಾಕಿಕೊಟ್ಟಿದ್ದಾರೆ ಅದು ಬಹಳ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದೆ. ಕಾಲೇಜುಗಳಲ್ಲಿ ಗಂಡಸರಿಗೆ ಸೇಕಡ 15 ಮತ್ತು ಹೆಣ್ಣುಮಕ್ಕಳಿಗೆ ಸೇಕಡ 20 ರ ಪ್ರಕಾರ ಹಂಚಬೇಕೆಂದು ಮಾಡಿದ್ದಾರೆ. ಈ 15 ರಲ್ಲಿ ಅರ್ಧಭಾಗವನ್ನು 1,200 ರೂಪಾಯಿ ಒಳಗೆ ವರಮಾನವಿರುವವರಿಗೆ ಕೊಡಬೇಕೆಂದೂ ಉಳಿದ ಅರ್ಧವನ್ನು 1,200 ರ ಮೇಲ್ಪಟ್ಟು 2,400 ರೂಪಾಯಿಗಳ ವರೆಗೂ ವರಮಾನವಿರುವವರಿಗೆ ಕೊಡಬೇಕೆಂದೂ ತೀರ್ಮಾನ ಮಾಡಿದ್ದಾರೆ. ಅದೂ ಅರ್ಧ ಫೀ ರಿಯಾಯಿತಿ ಇದರಿಂದ ನಿಜವಾಗಿ ಬಡವನಾಗಿದ್ದವನಿಗೆ, 1,200 ರೂಪಾಯಿ ಒಳಗೆ ಸಂಪಾದನೆ ಇದ್ದಾಗ್ಯೂ ಕೂಡ ಅವನಿಗೆ ಸಾಕಷ್ಟು ಫ್ರೀಷಿಪ್ ಸಿಕ್ಕದೆ 1,200 ರಿಂದ 2,400 ರೂಪಾಯಿ ವರೆಗೆ ಸಂಪಾದನೆ ಇರುವವರಿಗೆ ಅರ್ಧ ಫೀ ಕೊಡುವಂತಾಗಿದೆ. ಹೆಣ್ಣುಮಕ್ಕಳಿಗೂ ಅಷ್ಟೆ. ಇದರಿಂದ ಬಡನೌಕರರು ಮತ್ತು ಕೆಲಸಗಾರರು ಬಡತನದ ಬೇಗೆಯಲ್ಲಿ ಬೆಂದು ಬಳಲುವ ಜನರ ಮಕ್ಕಳಿಗೆ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವುದು ಬಹಳ ಕಷ್ಟವಾಗಿದೆ. ಒಂದೊಂದು ಮನೆಯಲ್ಲಿ 2-3 ಜನ ಮಕ್ಕಳು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಬೇಕಾಗಿದ್ದರೆ ಅವರ ಕಷ್ಟವನ್ನು ಹೇಳತೀರದು. ಈ ರೀತಿಯ ಕಷ್ಟಕ್ಕೆ ಅವರನ್ನು ಗುರಿಮಾಡುವುದು ಬಹಳ ತಪ್ಪಾಗುತ್ತದೆ. ಎಂದಿನಂತೆ ಸ್ಕಾಲರ್‌ಷಿಪ್ಪುಗಳನ್ನು ಕೊಟ್ಟು ಈವರಿಗೆ ಇನ್ನೂ ಉತ್ತೇಜನವನ್ನು ಕೊಟ್ಟು ಎಲ್ಲರೂ ವಿದ್ಯಾಭ್ಯಾಸದಲ್ಲಿ ಮುಂದುವರಿಯುವಂತೆ ಮಾಡಬೇಕಾದ್ದು ಸರ್ಕಾರದ

ಕರ್ತವ್ಯ. ನಾನು ವಿದ್ಯಾರ್ಥಿಗಳೊಂದಿಗೆ ನನ್ನ ಮಾತನ್ನೂ ಸೇರಿಸಿ ಅವರ ಕೇಳಿಕೆಯನ್ನು ನೆರವೇರಿಸಿಕೊಡಬೇಕೆಂದು ಮಾನ್ಯ ವಿದ್ಯಾ ಸಚಿವರನ್ನೂ ಹಾಗೂ ಮುಖ್ಯಮಂತ್ರಿಗಳನ್ನೂ ಕೇಳಿಕೊಳ್ಳುತ್ತೇನೆ. ವಿದ್ಯಾರ್ಥಿಗಳ ವಿಚಾರದಲ್ಲಿ ಬಹಳವಾದ ದಯೆಯನ್ನು ಇಟ್ಟು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅದರಂತೆಯೇ ಹೈಸ್ಕೂಲು ವಿದ್ಯಾರ್ಥಿಗಳ ವಿಚಾರದಲ್ಲಿಯೂ ಕೂಡ ಒಂದು ಮಾತನ್ನು ಹೇಳಬೇಕಾಗಿದೆ. ಕಳೆದ ವರ್ಷ ಏನು ವಿದ್ಯಾರ್ಥಿಗಳ ಸಂಖ್ಯೆ ಇತ್ತೋ ಅದರ ಎರಡರಷ್ಟು ಈ ಸಲ ಹೈಸ್ಕೂಲಿನ 8ನೆ ಸ್ಟ್ಯಾಂಡರ್ಡ್‌ನಲ್ಲಿದೆ. ಆದರೆ ಕಳೆದ ವರ್ಷ ಎಷ್ಟು ಸ್ಕಾಲರ್‌ಷಿಪ್ಪುಗಳನ್ನು ಕೊಟ್ಟಿದ್ದರೋ ಅಷ್ಟೇ ಈ ವರ್ಷವೂ ಕೊಟ್ಟಿದ್ದಾರೆ. ಆದುದರಿಂದ ಈ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಇಮ್ಮಡಿಯಾಗಿರುವುದನ್ನು ಗಮನಕ್ಕೆ ತೆಗೆದುಕೊಂಡು ಅವರಿಗೆ ಹೆಚ್ಚು ಸ್ಕಾಲರ್‌ಷಿಪ್ಪುಗಳನ್ನು ಕೊಟ್ಟು ಅನುಕೂಲ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

† ಶ್ರೀ ಸಿದ್ದಯ್ಯ ಕಾಶಿಮಠ (ಶಿರಹಟ್ಟಿ).—ಅಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಓದತಕ್ಕ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸತತವಾಗಿ ಮೂರು ದಿವಸಗಳಿಂದ ಮುಷ್ಕರ ಹೂಡಿದ್ದರೂ ಕೂಡ ಸರ್ಕಾರದವರು ಯಾವುದೇ ತರಹ ವಿಚಾರ ಮಾಡದೇ ಇವತ್ತಿನ ದಿವಸ ನಾವೆಲ್ಲರೂ ಸರ್ಕಾರದ ಮುಂದೆ ಈ ವಿಷಯವನ್ನು ತರಬೇಕಾಯಿತು. ಮುಷ್ಕರ ಹುಟ್ಟಲಿಕ್ಕೆ ಕಾರಣ ಈ ವಿದ್ಯಾರ್ಥಿಗಳಿಗೆ ಕೊಡತಕ್ಕ ಫ್ರೀಷಿಪ್ ಮತ್ತು ಸ್ಕಾಲರ್‌ಷಿಪ್ ಇವುಗಳ ಪ್ರಮಾಣದಲ್ಲಿ ಕಡಿತ ಮಾಡಿದ್ದು. ನನಗೆ ತಿಳಿದಹಾಗೆ ವಿದ್ಯಾರ್ಥಿನಿಯರಿಗೆ ಮೊದಲು ನೂರಕ್ಕೆ 50 ಇದ್ದುದನ್ನು 20ಕ್ಕೂ ವಿದ್ಯಾರ್ಥಿಗಳಿಗೆ ನೂರಕ್ಕೆ 30 ಇದ್ದುದನ್ನು 15ಕ್ಕೂ ಇಳಿಸಿದ್ದಾರೆ. ಈ ತೆರನಾದ ಕಡಿತ ಮಾಡಿದ್ದರಿಂದ ಮುಷ್ಕರ ಹೂಡತಕ್ಕ ಸನ್ನಿವೇಶ ಬಂತು. ಈಗಾಗಲೇ ನಮ್ಮ ಸ್ನೇಹಿತರು ಎಲ್ಲ ವಿಷಯಗಳನ್ನೂ ತಿಳಿಸಿದ್ದಾರೆ. ಕಾಲೇಜು ಪ್ರಾರಂಭವಾದ ಆರು ತಿಂಗಳಾದನಂತರ ಇಂಥ ತೀರ್ಮಾನವನ್ನು ಹೊರಗೆ ಹಾಕಿದ್ದರಿಂದ ಹುಡುಗರನ್ನು ಕಾಲೇಜುಗಳಿಗೆ ಕಳಿಸುವ ತಂದೆತಾಯಿಗಳಿಗೆ ಹಣ ಕಟ್ಟುವುದು ಬಹಳ ತೊಂದರೆಯಾಗಿದೆ. ನಾವು ತಿಳಿದಹಾಗೆ ಮುಖ್ಯಮಂತ್ರಿಗಳಲ್ಲಿ ವಿದ್ಯಾರ್ಥಿಗಳ ಪ್ರತಿನಿಧಿಗಳು ಹೋಗಿದ್ದು ಒಂದು ಮನವಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಮುಖ್ಯವಾಗಿ ಈಗ ಏನೊಂದು ಆರ್ಡರ್ ಮಾಡಿದ್ದಾರೆ ಅದನ್ನು ವಾಪಸು ತೆಗೆದುಕೊಂಡು ಮುಂದಿನ ವರ್ಷ ಚಾಲೂ ಸಾಲಿನ ಪ್ರಾರಂಭದಲ್ಲಿ ಸರ್ಕಾರದ ತೀರ್ಮಾನವನ್ನು ಮೊದಲೇ ಪ್ರಸಿದ್ಧಿಸಿ ಆ ತೆರನಾಗಿ ತಿಳಿಸಿ ಪ್ರಚಾರ ಮಾಡಿದರೆ ಅದು ಯೋಗ್ಯವೆಂದು ಕಂಡುಬರುತ್ತದೆ. ಅದರ ಸಲುವಾಗಿ ಆ ಮನವಿಯಲ್ಲಿರುವ ವಿಚಾರಗಳನ್ನು ವಿದ್ಯಾಮಂತ್ರಿಗಳು ಮತ್ತು ಮುಖ್ಯಮಂತ್ರಿಗಳೂ ಪರಿಶೀಲಿಸಿ ಇವತ್ತಿನ ದಿವಸ ಇರುವ ತೊಂದರೆಯನ್ನು ನೀಗಿಸಬೇಕೆಂದು ಹೇಳಿ ನಾನು ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ಎ. ಕೊಪ್ಪಳ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಸರಕಾರದ ಹೊಸ ಆಜ್ಞೆಯಿಂದ ಇವತ್ತಿನ ದಿವಸ ಕಾಲೇಜ್ ವಿದ್ಯಾರ್ಥಿಗಳ ಮುಂದೆ ಒಂದು ವಿಚಿತ್ರ ಪರಿಸ್ಥಿತಿ ಬಂದಿದೆ. ಈ ವರ್ಷ ಕಾಲೇಜುಗಳು ಪ್ರಾರಂಭವಾಗಿ ಆರು ತಿಂಗಳಾದಮೇಲೆ ವಿದ್ಯಾರ್ಥಿಗಳ ವಿಚಾರದಲ್ಲಿ ಸರಕಾರ ತನ್ನ ಧೋರಣೆ ಬದಲಿಸಿರುವುದರಿಂದ ಅರ್ಧದಷ್ಟು ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗಿದೆ. ಈಗ ಸರಕಾರ ಹೊರಡಿಸಿದಂಥ ಆರ್ಡರ್ ಕಾಲೇಜುಗಳು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಪ್ರಕಟ ಮಾಡಿದ್ದರೆ ಇಂಥ ತೊಂದರೆಯಾಗುತ್ತಿರಲಿಲ್ಲ. ಈ ವಿಚಾರದಲ್ಲಿ ಸರಕಾರ ಬಹಳ ಸಹಾನುಭೂತಿಯಿಂದ ವಿದ್ಯಾರ್ಥಿಗಳಿಗೆ ಅನುಕೂಲ ಒದಗಿಸಿಕೊಡುವಬಗ್ಗೆ ವಿಚಾರ ಮಾಡಬೇಕೆಂದು ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎ. ಕೃಷ್ಣ ಶೆಟ್ಟಿ (ಮಂಗಳೂರು II).—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸದಸ್ಯರಾದ ಶ್ರೀ ಶಿವಪ್ಪನವರು ತಂದಿರುವ ಸೂಚನೆಗೆ ಬೆಂಬಲವಾಗಿ ಒಂದೆರಡು ವಿಷಯಗಳನ್ನು ಈ ಮಾನ್ಯ ಸಭೆಯಮುಂದೆ ಇಡಲಿಕ್ಕೆ ಇಚ್ಛೆಪಡುತ್ತೇನೆ. ವಿದ್ಯಾರ್ಥಿಗಳ ಈ ಒಂದು ಪ್ರಕ್ಷೋಭ ನಿಜವಾಗಿಯೂ ಒಳ್ಳೆಯದಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ರಾಜಕೀಯ ವಿಚಾರದಲ್ಲಿ ಒಬ್ಬ ದೊಡ್ಡ ಮೇಧಾವಿಗಳು ಒಂದು ಮಾತು ಹೇಳುತ್ತಿದ್ದುದು ಜ್ಞಾಪಕಕ್ಕೆ ಬರುತ್ತಿದೆ. ವಿದ್ಯಾರ್ಥಿಗಳ ಈ ಒಂದು ಪ್ರಕ್ಷೋಭ ಆಂದೋಲನ ಅಂದರೆ ಸರಕಾರದ ಮಟ್ಟಿಗೆ ಜನತೆ ಅತೃಪ್ತಿ ಎಷ್ಟಿದೆ ಎನ್ನುವುದನ್ನು ಸೂಚಿಸುವ ಸಂಕೇತ ಎಂದು ಅವರು ಹೇಳುತ್ತಿದ್ದರು. ಚಿಕ್ಕಮಕ್ಕಳ ಮನಸ್ಸಿನ ಮೇಲೆ ಮೂಡಿದ ಭಾವನೆಗಳು ಸಣ್ಣಗಿಡದ ಮೇಲೆ ತೆಗೆದ ಗೆರೆ ದೊಡ್ಡ ಮರ ಆದಮೇಲೆ ದೊಡ್ಡದಾಗಿ ಕಾಣುವ ಹಾಗೆ ಇದೆ. ವಿದ್ಯಾರ್ಥಿಗಳು ದೊಡ್ಡವರಾದಮೇಲೆ ಮನಸ್ಸಿನಲ್ಲಿ ಮೂಡಿದ ಇಂಥ ಭಾವನೆಗಳು ಹೆಚ್ಚು ದೊಡ್ಡದಾಗಿ ಕಾಣುತ್ತವೆ. ಇದರಲ್ಲಿ ರಾಜಕಾರಣವಿಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಇಂದಿನ ಸರಕಾರದ ಧೋರಣೆಯನ್ನು ವಿದ್ಯಾರ್ಥಿಗಳು ವಿರೋಧಿಸುತ್ತಿದ್ದಾರೆ. ವರ್ಷದ ಮಧ್ಯದಲ್ಲಿ ಸರಕಾರ ಈರೀತಿ ಆರ್ಡರ್ ಹೊರಡಿಸಿರುವುದು ಸರಿಯಲ್ಲ. ದೇಶದ ಹಿತ ದೃಷ್ಟಿಯಿಂದ ನಾವು ಇದನ್ನು ಗಮನಿಸಬೇಕು. ಇದು ಮುಖ್ಯಮಂತ್ರಿಗಳ ಅಥವಾ ವಿದ್ಯಾಮಂತ್ರಿಗಳ ಪ್ರಶ್ನೆಯಲ್ಲ. ಇದರಲ್ಲಿ

(ಶ್ರೀ ಎ. ಕೃಷ್ಣಶೆಟ್ಟಿ)

ಸರಕಾರದ ಪ್ರೆಸ್ಟಿಜ್ ಪ್ರಶ್ನೆ ಬರುವುದಿಲ್ಲ. ದೇಶದ ಹಿತದೃಷ್ಟಿಯಿಂದ ಕೆಲಸ ಮಾಡಬೇಕಾಗುತ್ತದೆ. ಇದಕ್ಕೆ ಪರಿಹಾರ ಕಂಡುಹಿಡಿದು ಬಗೆಹರಿಸಬೇಕಾದುದು ಅಗತ್ಯವಾಗಿದೆ. ಅದರಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಯು ಹಳೆ ಮತ್ತು ಹೊಸ ಮೈಸೂರುಗಳಲ್ಲಿ ಕಲ್ಲಪ್ಪ ಮತ್ತು ಗುಂಡಪ್ಪಗಳ ನಡುವೆ ಪುಡಿಪುಡಿಯಾದ ಹಾಗೆ ಕಷ್ಟ ಬಂದೊದಗಿದೆ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ ಒಂದು ಪಾಯಿಂಟ್ ಆಫ್ ಆರ್ಡರ್, ಈ ಸಭೆಯಲ್ಲಿ ಮಾನ್ಯ ಮಂತ್ರಿಗಳಾಗಲಿ ಮಾನ್ಯ ಸದಸ್ಯರಾಗಲಿ ಏನಾದರೂ ತಿನ್ನುವ ಪದಾರ್ಥ ಬಾಯಿಯಲ್ಲಿ ಹಾಕಿಕೊಂಡು ಅಗಿಯುತ್ತಾ ಕೂತುಕೊಳ್ಳಬಹುದೇ?

ಶ್ರೀ ಎಸ್. ಆರ್. ಕಂಠಿ.—ಸಭೆಯಲ್ಲಿ ಕುಳಿತು ಉಸುರಾಡಿಸಬೇಡವೇ?

ಶ್ರೀ ಎ. ಕೃಷ್ಣಶೆಟ್ಟಿ.—ಸರಕಾರದ ಆಜ್ಞೆಯಿಂದ ವಿದ್ಯಾರ್ಥಿಗಳಿಗೆ ಕಷ್ಟವಾಗಿದೆ. ಫ್ರೀಷಿಪ್ ಸ್ಕಾಲರ್‌ಷಿಪ್ ವಿಚಾರದಲ್ಲಿ ಸರಕಾರ ತಳೆದಿರುವ ಧೋರಣೆ ಸರಿಯಾಗಿಲ್ಲ. ರಾಜ್ಯದ ಎಲ್ಲಾ ಪ್ರದೇಶದಲ್ಲಿಯು ಸರಾಸರಿ-ಆವರೇಜ್–ತೆಗೆದುಕೊಂಡು ಎಲ್ಲ ಕಡೆ ಸಮವಾಗಿ ಇರುವ ಹಾಗೆ ಮಾಡುವುದಕ್ಕೆ ಪ್ರಯತ್ನ ಮಾಡುವುದು ಸರಿಯಲ್ಲ. ಸರಕಾರ ಉದಾರ ಮನೋಭಾವನೆಯಿಂದ ಈ ಪ್ರಶ್ನೆ ಜಾಗ್ರತೆ ಪರಿಹರಿಸಬೇಕಾದುದು ಅಗತ್ಯ. ಇಲ್ಲದಿದ್ದರೆ ದೇಶದಲ್ಲಿ ಅನಾಹುತ ಉಂಟಾಗುವ ಸಂದರ್ಭ ಬರಬಹುದು. ಆದುದರಿಂದ ಸರಕಾರ ಇದಕ್ಕೆ ಗಮನ ಕೊಟ್ಟು ಜಾಗ್ರತೆ ಪರಿಹರಿಸಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

4-30 P.M.

†ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಸ್ವಾಮಿ; ಮಾನ್ಯ ಸದಸ್ಯರಾದ ಶ್ರೀ ಶಿವಪ್ಪನವರು ತಂದಿರತಕ್ಕಂಥ ವಿದ್ಯಾರ್ಥಿಗಳ ಮುಷ್ಕರಕ್ಕೆ ಸಂಬಂಧಪಟ್ಟ ಸೂಚನೆ ವಿಚಾರದಲ್ಲಿ ಒಂದೆರಡು ಅಂಶ ತಿಳಿಸಲು ಇಚ್ಛೆಪಡುತ್ತೇನೆ. ಈ ವರ್ಷದ ಅಂತ್ಯದಲ್ಲಿ ಈ ರೀತಿ ಸರಕಾರ ಹುಕುಂ ಹೊರಡಿಸಿದ ಮೂಲಕ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ದುಷ್ಪರಿಣಾಮ ಉಂಟಾಗಿರುತ್ತದೆ. ವ್ಯಾಸಂಗದಲ್ಲಿ ನಿರತರಾಗಿರತಕ್ಕಂಥ ಬಡ ವಿದ್ಯಾರ್ಥಿಗಳಿಗೆ ಬಹಳ ಅನ್ಯಾಯವಾಗಿದೆ. ಪರೀಕ್ಷೆಗಳಿಗೆ ಫೀಜ್ ಕಟ್ಟಬೇಕಾದ ಕೊನೆಯ ದಿನ ನಿನ್ನೆಯ ದಿವಸವೇ ಇತ್ತೆಂದು ಕೇಳಿದ್ದೇನೆ. ಫೀಜ್ ಕಟ್ಟಲು ಹಣ ಇಲ್ಲದೇ ಇರತಕ್ಕಂಥ ವಿದ್ಯಾರ್ಥಿಗಳಿಗೆ ನಿಜವಾಗಿಯೂ ಬಹಳ ಅನ್ಯಾಯವಾಗಿದೆ. ಇದರಿಂದ ಬಹಳ ಕೆಟ್ಟ ಪರಿಣಾಮ ಉಂಟಾಗುತ್ತದೆ. ಯೂನಿಫಾರ್ಮಿಟಿ ಮಾಡುತ್ತೇವೆಂದು ಹೇಳಿ ಈ ರೀತಿ ಮಾಡಿರುವುದು ಸರಿಯಲ್ಲ. ಇದಕ್ಕೂ ಮೊದಲು ಎಲ್ಲ ನೌಕರರ, ಅದರಲ್ಲಿಯೂ ವಿದ್ಯಾ ಇಲಾಖೆಯಲ್ಲಿ ಪೇ ಸ್ಕೇಲ್ಸ್ ಯೂನಿಫಾರ್ಮ್ ಆಗಿ ಮಾಡಬೇಕಾಗಿತ್ತು. ಹಾಸನ ಕಾಲೇಜ್‌ಬಗ್ಗೆ ಹೇಳುವುದಾದರೆ ಅಲ್ಲಿಯ ಬಡ ವಿದ್ಯಾರ್ಥಿಗಳಿಗೆ ನಿಜವಾಗಿಯೂ ಬಹಳ ಅನ್ಯಾಯವಾಗಿದೆ. ಆದುದರಿಂದ ಸರಕಾರ ಈ ವಿಷಯವನ್ನು ಪುನರ್‌ವಿಮರ್ಶೆ ಮಾಡಬೇಕಾದುದು ಅಗತ್ಯ. ಈ ಮೊದಲು ಕೊಟ್ಟಿರತಕ್ಕಂಥ ಕನ್‌ಸೆಶನ್ ಮುಂದುವರಿಸಿಕೊಂಡು ಹೋಗಬೇಕು, ಇಲ್ಲದಿದ್ದರೆ ಮಕ್ಕಳಿಗೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಈ ವಿಚಾರವನ್ನು ಸರಕಾರ ಪುನರ್ವಿಮರ್ಶೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

†ಶ್ರೀ ಎಸ್. ಗೋಪಾಲ ಸಾಲೆನ್ನ (ಮೂಡಬಿದರೆ).—ಸರ್ಕಾರದ ವಿದ್ಯಾನೀತಿಯಿಂದಾಗಿ ಸಣ್ಣ ಮಕ್ಕಳ ಎಂದರೆ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಅವಧಿಯಲ್ಲಿ ಪ್ರತಿವರ್ಷವೂ ಒಂದಲ್ಲ ಒಂದು ತರಹದ ಗಂಡಾಂತರವನ್ನು ತಂದು ಹಾಕಿ ಅವರ ಮಾನಸಿಕ ಅಭಿವೃದ್ಧಿಯನ್ನು ಕುಂಠಿತಗೊಳಿಸಿ ಅವರ ಭವಿಷ್ಯವನ್ನೇ ಹಾಳು ಮಾಡುವಂತಹ ಒಂದು ನೀತಿ—ಸಮಾನತೆಯನ್ನು ತರುತ್ತೇವೆ ಎಂದು ಹೇಳುವಂತಹ ಒಂದು ಮಾರ್ಗವನ್ನು ಅನುಸರಿಸುತ್ತಾ ಇದ್ದೀರಿ. ಕಳೆದ ವರ್ಷ ಶಾಲಾ ಕಾಲೇಜಿನ ಫೀಜನ್ನು ಹೆಚ್ಚಿಸುವ ವಿಷಯ ಬಂದಾಗಲೂ ಕೂಡ ಒಂದು ಚಳುವಳಿ ಆಯಿತು. ಈ ವರ್ಷ ಸ್ಕಾಲರ್‌ಷಿಪ್ ಮತ್ತು ಫ್ರೀಷಿಪ್ ಕಡಿತ ಮಾಡಬೇಕೆಂದು ಹೊರಟು ಈಗಲೂ ಒಂದು ಚಳುವಳಿಗೆ ಕಾರಣರಾಗಿದ್ದೀರಿ, ಫ್ರೀಷಿಪ್ ಮತ್ತು ಸ್ಕಾಲರ್‌ಷಿಪ್‌ಗಳ ಸಂಖ್ಯೆ ಜಾಸ್ತಿ ಮಾಡಬೇಕು, ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಾ ಇದೆ, ಶಾಲೆಗಳ ಸಂಖ್ಯೆ ಜಾಸ್ತಿಯಾಗುತ್ತಾ ಇದೆ, ಮಕ್ಕಳ ಮತ್ತು ಶಾಲೆಗಳ ಸಂಖ್ಯೆ ಯಾವ ದರದಲ್ಲಿ ಜಾಸ್ತಿಯಾಗುತ್ತಾ ಇದೆಯೋ ಅದೇ ದಾಮಾಷಾ ಪ್ರಕಾರ ಫ್ರೀಷಿಪ್ ಮತ್ತು ಸ್ಕಾಲರ್‌ಷಿಪ್ ಅವುಗಳನ್ನು ಜಾಸ್ತಿಮಾಡುವುದಕ್ಕೆ ಬದಲಾಗಿ ಕಡಿತಮಾಡಿ ಶಾಲಾಕಾಲೇಜುಗಳಿಗೆ ಬರತಕ್ಕ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂದು ಸರ್ಕಾರದವರ ಉದ್ದೇಶ ಇರಬಹುದೋ ಏನೋ, ಇದು ಸರಿಯಲ್ಲ. ಏಕೆಂದರೆ ಒಂದು ವೇಳೆ ಆ ರೀತಿ ಮಾಡಬೇಕೆಂದಿದ್ದರೆ ಅದಕ್ಕೆ ಬೇರೆ ದಾರಿಯನ್ನು ಹಿಡಿಯಿರಿ, 5–6 ಸಲ ಫೇಲ್ ಆದವರು ಇರುತ್ತಾರೆ, ಮತ್ತು ಓದುವುದರಲ್ಲಿ ಆಸಕ್ತಿ ಇಲ್ಲದ

ಮಕ್ಕಳು ಇರುತ್ತಾರೆ. ಅಂತಹವರಿಗೆ ಅವಕಾಶ ಕೊಡದೆ ಅವರ ಸಂಖ್ಯೆಯನ್ನು ಕಡಿಮೆ ಮಾಡುವ ದಾರಿಯನ್ನು ಹಿಡಿದುಕೊಳ್ಳಬೇಕೇ ಹೊರತು ಇರತಕ್ಕ ಸೌಲತ್ತುಗಳನ್ನು ಕಡಿಮೆ ಮಾಡುವ ನೀತಿ ಸರಿಯಲ್ಲ ಎಂದು ನಾನು ಹೇಳುತ್ತೇನೆ ಇದಕ್ಕೆ ಅನೇಕ ಕಾರಣಗಳಿರಬಹುದು, ಆದರೆ ವಿದ್ಯಾಮಂತ್ರಿಗಳು ಇದಕ್ಕೆ ತಾವು ಮಾತ್ರ ಜವಾಬ್ದಾರರಲ್ಲ, ಇಡೀ ಕ್ಯಾಬಿನೆಟ್‌ನ ಜವಾಬ್ದಾರಿ ಈ ವಿಷಯದಲ್ಲಿ ಇರುವುದರಿಂದ ವಿದ್ಯಾರ್ಥಿಗಳು ಒದಗಿಸಬೇಕೆಂದು ಕೇಳುತ್ತಾ ಇರತಕ್ಕ ಅನುಕೂಲತೆಗಳು ನ್ಯಾಯವಾದದ್ದು ಮತ್ತು ಸರ್ಕಾರದವರಿಗೆ ಅವನ್ನು ಒದಗಿಸಿಕೊಳ್ಳುವಷ್ಟು ಅನುಕೂಲವಿಲ್ಲ ಎಂಬ ಅಭಿಪ್ರಾಯವಿದ್ದರೆ ವಿದ್ಯಾಮಂತ್ರಿಗಳಿಗೆ ಅದು ವಿರೋಧವಾಗಿ ಕಂಡುಬಂದಿದ್ದ ಪಕ್ಷದಲ್ಲಿ ಕ್ಯಾಬಿನೆಟ್ಟಿನ ತೀರ್ಮಾನ ಬಹುಸಂಖ್ಯಾತರ ತೀರ್ಮಾನವಾಗಿದ್ದರೂ ಅವರು ರಾಜೀನಾಮೆ ಕೊಟ್ಟು ಮಕ್ಕಳು ಮಾಡುತ್ತಿರುವ ಆಂದೋಳನದೊಳಗೆ ಸೇರಿಕೊಂಡು ಅವರಿಗೆ ರಕ್ಷಣೆ ಕೊಡಬೇಕಾಗಿದ್ದುದು ಬಹಳ ಅಗತ್ಯವಾಗಿತ್ತು ಎಂದು ಹೇಳುತ್ತಾ ಇದ್ದೇನೆ. ಇದೇನೂ ಹೊಸದಲ್ಲ. ಕೇಂದ್ರ ಸರ್ಕಾರದಲ್ಲಿ ದಿವಂಗತ ಡಾಕ್ಟರ್ ಅಂಬೇಡ್ಕರ್ ಅವರು ಸಹ ಇಂತಹ ಒಂದು ಪ್ರಸಂಗ ಬಂದಾಗ ರಾಜೀನಾಮೆ ಕೊಟ್ಟು ಬಂದ ನಿದರ್ಶನ ಇದೆ. ಅದೇರೀತಿ ಎಷ್ಟೋ ಜನ ರಾಜೀನಾಮೆ ಕೊಟ್ಟಿದ್ದಾರೆ. ಹಾಗೆಯೇ ವಿದ್ಯಾರ್ಥಿಗಳ ಬೇಡಿಕೆ ನ್ಯಾಯವಾದದ್ದು ಎಂಬ ಅಭಿಪ್ರಾಯ ಅವರಿಗಿದ್ದ ಪಕ್ಷದಲ್ಲಿ ಅವರು ರಾಜೀನಾಮೆ ಕೊಡಬೇಕು. ಇವತ್ತು ಯೋಚನೆ ಮಾಡಿದ್ದೇ ಆದರೆ ಜನತಾ ಪ್ರತಿನಿಧಿಗಳಾದ ಆಡಳಿತ ಪಕ್ಷದ ಜನರು ವಿದ್ಯಾರ್ಥಿಗಳ ಕೇಳಿಕೆಯ ಕಡೆಗೆ ಗಮನ ಕೊಟ್ಟು ಅವರು ಪ್ರಭಾವವನ್ನು ಬೀರಿ ವಿದ್ಯಾರ್ಥಿಗಳು ಅವರೊಡನೆ ಹೊಂದಿಕೊಳ್ಳುವಂತೆ ಮಾಡಬೇಕಾದ್ದು ಬಹಳ ಅಗತ್ಯ. ಬೇರೆ ಯಾವುದೋ ಒಂದು ರೀತಿಯಲ್ಲಿ ನಿಷ್ಪ್ರಯೋಜನವಾಗಿ ಖರ್ಚು ಮಾಡತಕ್ಕ ಎಷ್ಟೋ ಯೋಜನೆಗಳು ಇವೆ. ಅವನ್ನು ಕಡಿತ ಮಾಡಿ ಇದಕ್ಕೆ ಭರ್ತಿ ಮಾಡಿ. ಗೋವಾದಲ್ಲಿ ಬಂದೋಡ್ಕರ್ ಅವರು ಚೀಫ್ ಮಿನಿಸ್ಟರ್‌ಆಗಿ ಅವರ ಸಂಬಳವನ್ನೇ ಬಿಟ್ಟುಕೊಟ್ಟಿದ್ದಾರೆ. ಮನೆ ಬೇಡ ಕಾರು ಬೇಡ ಎಂದು ಹೇಳಿದ್ದಾರೆ, ಆ ಮಾದರಿಯನ್ನು ತೆಗೆದುಕೊಂಡು ಹಣವನ್ನು ಉಳಿಸಬೇಕಾಗುತ್ತದೆ, ಆ ರೀತಿ ಉಳಿಸಿದ ಹಣವನ್ನು ಮಕ್ಕಳಿಗೆ ಉಪಯೋಗಿಸಿ. ಇದು ವೈಯುಕ್ತಿಕ ಜವಾಬ್ದಾರಿಯ ಪ್ರಶ್ನೆ ಅಲ್ಲ. ಇಡೀ ಮಂತ್ರಿ ಮಂಡಲದ ಸರ್ಕಾರದ ಜವಾಬ್ದಾರಿ ಇದರಲ್ಲಿ ಇದೆ. ಮತ್ತು ಆಡಳಿತ ಪಕ್ಷದ ಜವಾಬ್ದಾರಿ ಇದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪಕ್ಷದ ನೀತಿಯನ್ನು, ಸರ್ಕಾರದ ನೀತಿಯನ್ನು ಬದಲಾಯಿಸಿ ವಿದ್ಯಾರ್ಥಿಗಳಿಗೆ ಏನು ಸೌಲಭ್ಯ ದೊರಕಿಸಿಕೊಡಬೇಕೋ ಅದನ್ನು ಕೂಡಲೇ ಕಾರ್ಯಗತ ಮಾಡಬೇಕೆಂದು ಕೇಳಿಕೊಂಡು ಏನೇ ನಷ್ಟಬರಲಿ ಏನೇ ಕಷ್ಟ ಬಂದರೂ ಅದನ್ನು ನಿರ್ವಹಿಸಲಿಕ್ಕೆ ಶಕ್ತಿ ಮತ್ತು ತಾಳ್ಮೆಯನ್ನು ಪಡೆದುಕೊಳ್ಳಿ ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ದೇವಯ್ಯ (ಮಂಡ್ಯ).—ಸಭಾಪತಿಗಳೇ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ವಂದಿಸುತ್ತೇನೆ. ಸ್ವಾಮಿ, ಕಾಲೇಜು ಹುಡುಗರು ಸ್ವರಾಜ್ಯ ಸಂಪಾದನೆ ಮಾಡುವುದಕ್ಕೆ ಏನು ಕಷ್ಟಪಟ್ಟಿದ್ದಾರೆ ಎಂಬುದನ್ನು ಕಾಂಗ್ರೆಸ್ ಸರ್ಕಾರದವರು ನೆನೆಸಿಕೊಳ್ಳಬೇಕು. ಆ ಕಾಲದಲ್ಲಿ ಆ ಹುಡುಗರು ನಿಮಗೆ ಸಹಕಾರ ಕೊಡದೇ ಇದ್ದಿದ್ದರೆ ಸ್ವರಾಜ್ಯ ಸಿಕ್ಕುತ್ತಾ ಇತ್ತೆ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಆ ಸಮಯದಲ್ಲಿ ಅನೇಕ ಹುಡುಗರು ಎಷ್ಟು ಕಷ್ಟಕ್ಕೆ ಈಡಾಗಿದ್ದರು, ಎಷ್ಟು ನಷ್ಟ ಹೊಂದಿದರು. 1947ನೇ ಇಸವಿಯಲ್ಲಿ ಎಂದರೆ ಒಬ್ಬಿಬ್ಬ ಹುಡುಗರು ಮೈಸೂರಿನಲ್ಲಿ ಗುಂಡಿನೇಟಿಗೆ ಸಿಕ್ಕಿ ಸತ್ತಿದ್ದಾರೆ. ಇದನ್ನು ಸರ್ಕಾರದವರು ಸ್ವಲ್ಪ ನೆನಸಿಕೊಳ್ಳಬೇಕು. ಮಾನ್ಯ ಸ್ನೇಹಿತರೊಬ್ಬರು ಹೊಸ ಮೈಸೂರು ಹಳೇ ಮೈಸೂರು ಎಂಬುದಾಗಿ ಹೇಳಬೇಡಿ ಎಂದು ಹೇಳಿದರು, ಬೊಂಬಾಯಿನಲ್ಲಿರತಕ್ಕ ಫೀಜನ್ನು ಇಲ್ಲಿಗೆ ಅನ್ವಯಿಸಿ ಜಾಸ್ತಿ ಮಾಡುವುದಕ್ಕೆ ಬದಲಾಗಿ ಇಲ್ಲಿ ಕಡಿಮೆ ಇತ್ತು ಅಲ್ಲೂ ಕೂಡ ಕಡಿಮೆ ಮಾಡಬೇಕೆಂದು ಅವರು ಏಕೆ ಹೇಳಬಾರದಾಗಿತ್ತು? ಹಳೇ ಮೈಸೂರಿನಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಎಷ್ಟು ಫೀಜು ಕೊಡುತ್ತಾ ಇದ್ದಾರೋ ಅಷ್ಟೇ ಕೊಡಿ. ಆ ರೀತಿ ಕೊಡುವುದಕ್ಕೆ ಇಷ್ಟವಿಲ್ಲದಿದ್ದರೆ ಹೆಚ್ಚಿಗೆ ಕೊಡಿ, ನಾವು ಒಂದು ಕಡೆ ಬೆರೆತುಕೊಂಡ ಮೇಲೆ, ಒಬ್ಬರಿಗೊಬ್ಬರು ಸೌಹಾರ್ದದಿಂದ ನಡೆದುಕೊಳ್ಳಬೇಕು ಎನ್ನುವಾಗ ಕಹಿ ವಾತಾವರಣವನ್ನುಂಟು ಮಾಡುವುದು ಸರಿಯಲ್ಲ. ಈ ರೀತಿ ಮಾಡುವುದರಿಂದ ದೊಡ್ಡಮೇಟಿಯವರು ಹೇಳುತ್ತಾ ಇರತಕ್ಕ ಕರ್ನಾಟಕ ಎನ್ನುವುದು ಹೇಗೆ ತಾನೆ ಆಗುತ್ತದೆ ಸ್ವಾಮಿ? ಇದೆಲ್ಲಾ ಸುಲಭವಾಗಿ ಆಗುತ್ತದೆಯೇ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. 1947 ರಿಂದ ಈಚೆಗೆ ಎಷ್ಟು ಜನ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ, ಅವರೆಲ್ಲರೂ ಸರ್ಕಾರಕ್ಕೆ ವಿರೋಧವಾದರೆ ಏನು ತೊಂದರೆ ಇದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ವಿದ್ಯಾ ಮಂತ್ರಿಗಳು ಇದು ಕ್ಯಾಬಿನೆಟ್‌ನಲ್ಲಿ ಮಂಜೂರಾದುದು ಎಂದು ಹೇಳುತ್ತಾರೆ. ಅವರ ಸಲಹೆ ಇಲ್ಲದೆ ಹೇಗೆ ರೆಕಾರ್ಡ್ ಅಲ್ಲಿಗೆ ಹೋಯಿತು! ಅವರು ಇದಕ್ಕೆ ಅವಕಾಶ ಮಾಡಿಕೊಟ್ಟ ಮೇಲೆ ಕ್ಯಾಬಿನೆಟ್ ಇದನ್ನು ಅಂಗೀಕಾರ ಮಾಡಿರಬಹುದೇ ಹೊರತು ಬೇರೆ ರೀತಿಯಲ್ಲಿ ಆಗುವುದಕ್ಕೆ ಸಾಧ್ಯವೇ ಇಲ್ಲ. ಈ ವಿದ್ಯಾಮಂತ್ರಿಗಳು ಬಂದ ಮೇಲೆ ಕೆಲವು ಬಹಳ ಕಷ್ಟಗಳು ಬಂದೊದಗಿವೆ. ಅವರು

(ಶ್ರೀ ಜಿ. ದೇವಯ್ಯ)

ಅವರ ಆತ್ಮವನ್ನು ಚೆನ್ನಾಗಿ ವಿಮರ್ಶೆಮಾಡಿ ನೋಡಿಕೊಂಡಷ್ಟೇ ಆದರೆ ಇದು ಅವರಿಗೆ ಚೆನ್ನಾಗಿ ಅರ್ಥವಾಗುತ್ತದೆ. ಹೋದ ವರ್ಷ 7-8 ನೇ ತರಗತಿಪರೀಕ್ಷೆಯ ವಿಷಯ ಆಯಿತು, ಈಗ ಕಾಲೇಜು ಹುಡುಗರಿಗೆ ತೊಂದರೆಯಾಗಿದೆ. ಆದ್ದರಿಂದ ನಾನು ತಮ್ಮಲ್ಲಿ ಹೇಳಬಯಸುವುದು ಏನೆಂದರೆ ಹುಡುಗರಿಗೆ ಅನುಕೂಲ ಮಾಡಿಕೊಟ್ಟು ಒಳ್ಳೆಯ ಹೆಸರು ತಗೆದುಕೊಳ್ಳಿ, ಬೇಕಾದರೆ ನೀವೇ ಶಾಶ್ವತವಾಗಿ ಇರಿ—ಏಕೆಂದರೆ ನಾವು ಅಲ್ಲಿಗೆ ಬರುವ ಹಾಗೆ ಇಲ್ಲ. ನೀವು ಹೋದರೆ ಇನ್ನೊಬ್ಬರು ಕಾಂಗ್ರೆಸ್‌ನವರೇ ಅಲ್ಲಿಗೆ ಬರುವುದು ಎಂಬುದನ್ನು ನಾವು ಅರಿಯದೆ ಇಲ್ಲ. ನೀರಾವರಿ ಮಂತ್ರಿಗಳು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಜನಗಳಿಗೆ ಸಹಾಯ ಮಾಡಬೇಕೆಂದು ಹೊರಟಿದ್ದಾರೆ, ಹಾಗಿರುವಾಗ ನೀವು ಹಳ್ಳಿಯಿಂದ ಬಂದು ಅನ್ನ ಆಹಾರ ಇಲ್ಲದೇ ವಿದ್ಯಾಭ್ಯಾಸ ಮಾಡುತ್ತಿರುವವರಿಗೆ ಸಹಾಯ ಮಾಡದೇ ಹೋದ ಪಕ್ಷದಲ್ಲಿ ಅವರಿಗೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ಈ ಮಕ್ಕಳ ತಾಯಿತಂದೆಗಳು ಆಸ್ತಿ ಇಲ್ಲದೆ ಬಡತನದಿಂದ ಈ ದಿವಸ ಅವರು ತಮ್ಮ ಮನೆಮಠಗಳನ್ನು ಮಾರಾಟಮಾಡಿ ಮಕ್ಕಳಿಗೆ ದುಡ್ಡನ್ನು ಕಳುಹಿಸುತ್ತಿದ್ದಾರೆ. ಅವರು ಈ ದುಡ್ಡಿಗಾಗಿ ಹಾಕುತ್ತಿರುವ ಕಣ್ಣೀರನ್ನು ನೋಡುವುದಕ್ಕಾಗುವುದಿಲ್ಲ. ಇಂಥಾ ಸಂದರ್ಭದಲ್ಲಿ ತಾವೇಕೆ ಕೆಟ್ಟಹೆಸರನ್ನು ತಗೆದುಕೊಳ್ಳಬೇಕು: ಸರ್ಕಾರದವರು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಕೊಡ. 5-10 ಲಕ್ಷ ರೂಪಾಯಿಗಳನ್ನು ಧಾರಾಳವಾಗಿ ಕೊಡಿ. ನಾನು ಇಷ್ಟು ಮಾತನಾಡಲು ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ (ಗಂಡಸಿ).—ಸ್ವಾಮಿ, ನಾನು ಹೆಚ್ಚಿಗೆಯೇನೂ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ವಿದ್ಯಾ ಮಂತ್ರಿಗಳಿಗೂ ಮಕ್ಕಳಿದ್ದಾರೆ. ಆದರೆ ಈ ಮಕ್ಕಳ ವಿಚಾರದಲ್ಲಿ ಒಂದು ಮುಖ್ಯವಾದ ಮಾತನ್ನು ಹೇಳಬೇಕಾಗಿದೆ; ಅದೇನಂದರೆ ಈ ವಿದ್ಯೆ ಒಂದು ಜೇನಿನ ಗೂಡಿದ್ದ ಹಾಗೆ. ವಿದ್ಯೆಯು ಜೇನು ತುಪ್ಪವಿದ್ದ ಹಾಗೆ; ಮತ್ತು ವಿದ್ಯೆಯು ಒಂದು ಸುವಾಸನೆಯ ಪುಷ್ಪವಿದ್ದ ಹಾಗೆ. ಈ ಮಕ್ಕಳು ಜೇನು ಹುಳುಗಳಿದ್ದ ಹಾಗೆ. ಹುಡುಗರು ಆ ವಿದ್ಯೆಯೆಂಬ ಜೇನು ತುಪ್ಪವನ್ನು ಹೀರುತ್ತಿರುವಾಗ್ಗೆ ಆ ಜೇನುಗೂಡಿಗೆ ತಾವು ಒಂದು ಕಲ್ಲನ್ನೊಗೆದರೆ ಆಗೇನಾಗುತ್ತದೆ ಗೊತ್ತೆ? ಆ ಹುಳುಗಳೆಲ್ಲಾ ರೊಚ್ಚಿಗೆದ್ದು ನೀವು ಎಲ್ಲಿ ಹೋದರೂ ನಿಮ್ಮನ್ನು ಅವು ಬಿಡುವುದಿಲ್ಲ; ಅಟ್ಟಿಕೊಂಡು ಬರುತ್ತಾವೆ.

ಶ್ರೀ ಎಸ್. ನಿಜಲಿಂಗಪ್ಪ.—ಆ ರೀತಿ ಅವರು ಮಾಡಲೆಂದು ನೀವು ಈಗ ಈ ಒಂದು ಸೂಚನೆಯನ್ನು ಮಾಡುತ್ತಿದ್ದೀರಾ!

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಅವರು ಹಾಗೆ ಮಾಡಬಾರದೆಂದು ಹೇಳುತ್ತೇನೆ. ಈಗ ವಿದ್ಯಾ ಮಂತ್ರಿಗಳಿಗೂ ಮಕ್ಕಳಿದ್ದಾರೆ. ಒಂದು ವೇಳೆ ಇವರೂ ಆ ಬಾಕೀ ಜನಗಳಂತೆ ಇದ್ದಿದ್ದರೆ ಏನು ಹೇಳುತ್ತಿದ್ದರು! ಸರ್ಕಾರದವರು ಇತ್ತ ಜನರ ಮೇಲೆ ಟ್ಯಾಕ್ಸ್ ಹಾಕಿ ಅವರ ದ್ರವ್ಯವನ್ನು ಹೀರುತ್ತಿದ್ದಾರೆ; ಅವರನ್ನು ನಿರ್ಗತಿಕರನ್ನಾಗಿ ಮಾಡುತ್ತಿದ್ದಾರೆ. ಇನ್ನೊಂದು ಕಡೆ ವಿದ್ಯಾಸಂಸ್ಥೆಗಳ ಮೇಲೆ ಹೀಗೆಲ್ಲಾ ದುಡ್ಡನ್ನು ಹಾಕಿ ಕೊಡಿ ಎಂದು ಕೇಳುತ್ತಿದ್ದಾರೆ. ಈ ಎರಡನ್ನೂ ತಡೆದುಕೊಳ್ಳುವ ಶಕ್ತಿ ಅವರಿಗಿದೆಯೇ? ಈ ಎರಡರಲ್ಲಿ ಯಾವುದನ್ನಾದರೂ ಒಂದನ್ನು ವಿಧಿಸಿ; ಒಂದನ್ನು ಕೈಬಿಡಿ. ಇಷ್ಟು ಅನುಕೂಲವನ್ನು ಮಾಡಿ ಶ್ರೀ ಮಾನ್ ಕಂಠಿಯವರು ನಮ್ಮ ಮೈಸೂರು ಇತಿಹಾಸದಲ್ಲಿ ಒಂದು ಅಚಂದ್ರಾರ್ಕವಾದ ದೊಡ್ಡ ಕೀರ್ತಿಯನ್ನು ಗಳಿಸಿಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri S. R. KANTHI (Minister for Education).—Sir, the Hon'ble Members on the other side have spoken at length on the strike. But, I found out that the Hon'ble Members on the other side still think that the Mysore State is the ex-Mysore State—the present State is the ex-Mysore State. That is the mistake that they are making. When the Government is to rule and to give concessions, it has to look to every student from every corner. I have not made this uniformity. It has come to me as a legacy from the previous Ministry after the re-organisation. In the secondary education, there has been uniformity. After we took office here under our present Chief Minister, we raised the free concessions to the income group of Rs. 2,400. I do not think it applies to only one area. It applies to every area and it benefits

everybody wherever they may be in Mysore State. I must make it clear that the step of Rs. 2,400 income group getting free concessions at the High School, is a step which has been taken by Mysore State alone and no other State has taken such a step.

The other point that this Ministry was to do was that the conditions of service and superannuation of the teachers should be improved. Accordingly, Government have taken a number of steps. In addition to that, Government has introduced what is called the 'triple benefit scheme'. It is a scheme.......

SRI K. H. RANGANATH (Mudigere).—Where do we get private schools?

SRI S. R. KANTHI.—In the entire State we have got 1,250 High Schools of which 153 are Government High Schools and the rest of them are private or Municipal or Taluk Board or District Board High Schools. Out of this 153, in the entire ex-Mysore State alone, there are hardly 81 High Schools which belong to the Government. In ex-Mysore, the number of High Schools belonging to Government are much more. The highest number comes from Hyderabad-Karnataka, where there are 51 High Schools. From the point of view of highest proportion, the first comes Hyderabad and the second ex-Mysore area and then the other areas come. When we take the larger interest of all the 1,250 High Schools, you will please see that this is a measure which will benefit everybody. But, to be under the impression that it is not going to benefit everybody, is not correct. So, if the Hon'ble Members think that the 'triple benefit scheme' only benefits certain areas, they are not correct. I have told just now that uniformity is not a thing that I have introduced. There has been uniformity before I took office as Education Minister. In the secondary schools, in the Technical Colleges and Polytechnics Medical and other professional Colleges, there has been absolut uniformity in the matter of fees, in the matter of scholarships and in the matter of free-ships. In order to have a uniform basis also for the Arts, Science and Commerce Colleges, Government tried to introduce this system last year. The uniformity in scholarhips which was subsisting last year is also subsisting this year. If the Hon'ble Members are prejudiced, I have nothing to say.

MR SPEAKER.—They are not.

SRI S R. KANTHI.—I hope so. I was talking about uniformity. There has already been uniformity before I took office as Education Minister in the Technical Colleges, in the Professional Colleges and Polytechnics in the entire State. So, when I took office, I thought that there should be uniformity in the matter of freeships, scholarships and fees. I do not want to traverse the position of fees, because even now it is not uniform. It has been raised that is all. Because, Sir, the Resources and Economy Committee, the Ramachandra Rao Committee recommended that we should increase to the Madras model. We have done it. Last year, we gave 50 per cent reduction and this year we have implemented in full. This fee rise was the decision taken by the Cabinet. The decision on scholarship was also a decision taken by the

(SRI S. R. KANTHI,

Cabinet. The Hon'ble Members should know all this. They are not so ignorant as that. They want to hold one single Minister responsible for this. I beg to state that they are not fair to me. Why should I be there as Minister if I am not able to implement the policy of the Government? Once again Sir, I say that I am here as a servant of the Government, as one among the Council of Ministers.

Sri S. M. KRISHNA.—Servant of the Government, not of the people.

Sri S. R. KANTHI.—I am a servant of the people much more than you; for forty years, I have served the people.

Sri S. M. KRISHNA.—You are betraying them.

Sri S. R. KANTHI.—No, no, only people who are prejudiced against me say that I am betraying. I have not betrayed anybody.

Sri S. M. KRISHNA.—You are prejudiced against the students.

Sri S. R. KANTHI.—No, I can give you facts and figures and I can prove your impressions are not correct.

Sri H. R. KESHAVA MURTHY.—Are you different from the Government, Sir?

Sri S. R. KANTHI.—I am part of the Government.

Mr. SPEAKER.—I request Hon'ble Members not to interfere.

Sri S. R. KANTHI.—Why should the Opposition Members go on saying that I am only responsible. I am also responsible. I am 100 per cent responsible. I am also responsible as part of the Government. But the Hon'ble Members on the opposite, have a motive in saying that I am responsible.

Sri S. M. KRISHNA.—Why are you shifting responsibility on the Cabinet?

Sri S. R. KANTHI.—They want to see that some dust is thrown on me. I am resisting it.

Sri G. V. GOWDA.—It is not relevant, Sir.

Sri C. J. MUCKANNAPPA.—It is irrelevent, Sir.

Sri S. R. KANTHI.—Venktai Gowda, I am not going to yield.

Sri S. M. KRISHNA.—I am raising a point of order, Sir. Can the Hon'ble Minister address an Hon'ble Member of this House as 'Venktai Gowda'; he did not say Mr. Venktai Gowda.

Sri G. V. GOWDA.—I have no objection, Sir. But he should not say that I am trying to throw dust on him. It is not proper.

Sri S R. KANTHI.—If they say that there has to be some uniformity, Government has to take some steps to make it uniform. The step that has been taken to bring about uniformity is not so harmful as Hon'ble Members want to make out. I will show by figures that in no way it is going to affect the previous position. In the previous years 25 per cent students at the PUC were awarded free-studentship. This included the figure of scholarship holders. The 25 per cent of the concessions that were given, they also included scholarship-holders who were also given freeships. And now, within the fifteen per cent that is

now allowed as free student-ships, scholarship-holders who get freeships, are not included. That is, fifteen per cent *plus* something, is the position now. So, previously 25 per cent free-ships included also scholarship-holders Now, fifteen per cent freeships does not include freeships granted to scholarship-holders. Sir, it comes almost to the same position—again 25 per cent.

(*Interruption.*)

I will give the entire figures. The number of scholarship-holders is 2,118. According to old figure of 25 per cent, out of 23,500 students in the PUC, there will be 5,780 freeships. This number of 5,870 includes also scholarship-holders who were also free-ship-holders. Deducting the number of freeships given to the scholarship holders, namely 2,118, we have 3,752 free studentships only. Bare freeships will come to the figure of 3,752 according to the old rule. 2,118 would be both scholarship and freeship-holders. Now, at the present rate of fifteen per cent which is exclusive of freeships given,—only freestudentship at the rate of 15 per cent comes to 3,525. Sir, according to old system, it came to about 3,752. The difference is only marginal which is 227 and arises out of the rounding of the percentage. So, under the present system of awarding 15 per cent is in no way inferior or is going to affect substantially that percentage of 25 which included also scholarship-holders. This is about PUC.

Similarly, for the degree classes, the old rate of 30 per cent included 1,320 scholarship holders who were also given freeships. The present rate of 15 per cent excludes this number. Once again it is about 700 out of 3,500. Now the difference between the old system and the present system is at the PUC level 227 and at the degree level 700.

(*Interruption.*)

Hon'ble Members will please bear with me when I quote figures. I have got them from the Directorate.

5-00 P.M.

Now the Hon'ble Members said several things. I do not want to go into all those questions.

Hon'ble Members say that Government gave some assurance. I will surely be willing to go into that and advise the Cabinet. Let the Hon'ble Members think that I am also as sympathetic as they are. Sir, Government cannot be sympathetic to certain area and unsympathetic to certain other area. That is what is called uniformity. That is the problem. This uniformity I have just now said, has not inflicted suffering on anybody. Just a couple of minutes ago the students came to me and I had a talk with them. I told them that this is the position ; you give your opinion after consideration. They could not put their mind and apply themselves to the subject at that time. They were emotional. They said so many things. They have also given me a paper here which I am going to place before the Cabinet and the Chief Minister.

(SRI S. R. KANTHI)

Sir, I can assure the Hon'ble Members that I am as such sympathetic as the Chief Minister or any other Minister. After all, they must understand......

(*Interruption.*)

It does not lie in the mouth of the Hon'ble Member Sri G. V. Gowd to say that I should not bring about uniformity. I have already made it clear by figures that in no way it is affecting substantially the ex-Mysore area. If the same benefits could be distributed to other areas, why should Hon'ble Members on the other side, object to me That is what we have achieved. Even now, if you say that we should give 15 per cent or any per cent you like, I assure them that I will be sympathetic towards it, provided the entire benefit goes to every student in the State. None of the Hon'ble Members on the other side has spoken about it

In the case of Sri Krishniah Setti, It appears that he is a merchant like me. He knows how to bargain better. He knows that by this measure the South Kanara people are being benefited. I have got the representation of the students. I request the members on the other side to go and request the students to give up the strike. Yesterday I made an appeal that they should give up the strike. I would appeal to the members on the other side to go and tell the students that they are not going to suffer in any respect and that they must give up the strike. It is no good for us to raise a question here when the students outside are agitated on this problem.

Sri Krishna has raised a point in regard to NCC. All the Universities in India have accepted compulsory NCC Training as part of the curriculum in the PUC and First two years of B.A./B.Sc. Courses. Certain Universities have also readjusted their syllabi to provide for NCC training. As it is a part of different courses now, the students cannot have any complaint. Government have no direct connection with the formulation of courses. Government have been trying with the Government of India for sharing the tiffin charges of the N. C. C. Cadets. I have personally met and discussed with the previous Education Minister and the present Defence Minister. The attempts have not borne any fruit so far. The Government of Mysore has to bear practically the burden. The Cabinet is considering that question.

Some of the Honourable Members raised the question about the teaching staff. Several Lecturers, Tutors and Demonstrators have been appointed during the last few months and there is no dearth of teaching staff to cope with the existing demands in any colleges. There are one or two vacancies in each College due to lack of suitable personnel for recruitment. This is however not a new feature. This state of affairs has been found in the previous years also. The average shortage in teaching staff works out to 4 per cent in all the Government Colleges in other words, out of a total strength of about 1,000 there are only 42 vacancies. You will see that the matter is very much exaggerated so far as the lack of teaching staff is concerned.

Sri S M. KRISHNA.—What about the High Court orders regarding Tutors and Demonstrators ?

Sri S. R. KANTHI.—That is not a question here. I do not want to add more. some Honourable Members have referred to pay scales. Pay scales have been equalised. But the persons coming out of erstwhile Mysore area must opt out to Mysore scales of pay. Thousands and thousands of them have opted out to the pay scales.

Something was said about Hassan Dirstrict. Government have received representation in this respect. We are looking into that. Mr. Krishana talked about the Hubli incident. Government has no responsibility so far as the strike in Lamington Hospital is concerned They are under the wrong impression about the Government Order. We have given instructions to follow the Government Order strictly and not interpret the Government as they like. With these words, I thank the Honourable Members for partcipation in the debate; I request them humbly that they will help us in solving this question, not merely carrying on a debate like this.

†Sri S. NIJALINGAPPA (Chief Minister).—With your permission, I would like to express myself on this matter. I am listening with great attention and regard to the various remarks made by the members of this House and certain very kind references were made to me. Possibly, that was because of the expectation that abusing the Education Minister and extolling me, I would rather be inclined to consider this sympathetically. Let me assure you and this House that so far as the children are concerned I have every sympathy for them, affection and love for them. I want them to develop. I want that every citizen of India should be educated and every opportunity created to develop his personality to the fullest extent. The only limiting factor is our capacity to find funds for this purpose. Even so, if it means sacrifice and even suffering in other sectors, I would not mind, if it becomes necessary in this regard. But those friends who have made kind references to me, could not they advise the students to come to me in person ; why should they not tell them 'Come and see the Chief Minister. He is a kind man. He will listen to you.' I am so sorry except that I read in the Papers this morning that there was a strike, I do not know anything of this trouble. To this moment, I do not know what exactly are their demands. I have not got a copy of even the memorandum given to the Education Minister. They could have at least been kind enough to give me a copy of the memorandum and if I had got it, I am sure it would have received the highest amount of sympathy at my hands and at the hands of my colleagues. We have taken a decision, true. The Education Minister has given reasons for the decision. Even so, if a section of the students are very much affected and affected adversely, I would not mind reviewing the position to see if anything can be done. Why did they not come to me ? Were they afraid of me or the friends who set them up did not want them to see me. My own feeling is that this student population who deserve our sympathy have been very wrongly advised and I think it is essentially this wrong advice that has been responsible for making

them go on strike and take up an attitude which they have taken to-day. I am sure that some people must have a set them up. I am not making, any allegation against any particular individul.

Sri S. M. KRISHNA.—It is the Government that have set them up by their order.

Sri S. NIJALINGAPPA.—It pays certain members to say so. I have been in politics for a fairly long time; I have acquired sufficient experience in this field and I know how one feels. I know he is voicing an expression used by another member, but I shall not analyse it. I say this much that Government have got every sympathy for the student world. I would appeal through you to the student population that if they have got any difficulty or if any injustice is done to them, if they feel so, let them not be over-awed, let them not be emotionally upset. Let them come to me and to the Education Minister. We will consider their case most sympathetically. I will appeal 'Desist from this sort of attitude. Go to classes. Come to us whenever it is convenient." We will hear them; we have sympathy for them. I am myself a poor man. I have educated myself. I know how poor students feel, how their parents feel. Because education is most important, we have made it compulsory and free and when no other State has done it, we have raised the exemption level to Rs. 2,400. Much is made of the situation. An attempt is even made and an opportunity is taken of it to bring about a sort of opinion in public mind that]we are discriminating against old Mysore. I belong to old Mysore. I do not think any discrimination is indulged in. People outside feel that emotional integration is necessary and it looks as though they are shaking them and disturbing them. I do not think, anything has been done by this Government to make any discrimination between that area or this area. The most backward area is receiving the greatest attention. Do not for a moment think that in old Mysore everything was allright. We have been educationally backward as any other area. In fact the area that came from Madras, specially Mangalore, from which part you come, Sir, is the most advanced. Coorg is the more advanced. We only come third. Bombay area is also more advanced. Are we going to make distinction from area to area? We are the citizens of the State and we are entitled to equal treatment wherever we are. That is the attitude that the Government has taken, and anybody who says that, I am sure, does it with a particular motive. I ask the Member who feel like that to come to me and tell me how discrimination has been made. It is my liability to convince them and tell the people that nothing of that kind is done. Sir, I refute all allegations or any attempt to create such a opinion outside the House.

So far as this subject concerned, Government has taken a decision. I have not seen the memorandum of the students. Let them come and explain their difficulties if any. They have met the Education Minister and explained. They say, I am a very good man. Why not they come

to me. I have a large number of children and I am educating them. Some of them could not go to colleges because of my difficulties. Two or 3 of them are going to college. Let the students come to me and I will listen to them and I will take the matter before my collegues and if any sympathy is required, we will do the needful.

MYSORE IRRIGATION BILL, 1963.

(Motion to consider)

† ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಮಾನ್ಯ ಸಭಾಪತಿಯವರೇ, ನೀರಾವರಿಗೆ ಸಂಬಂಧಪಟ್ಟ ಮಸೂದೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದು ಸೆಲೆಕ್ಟ್ ಕಮಿಟಿಗೆ ಹೋಗುತ್ತದೆಂಯ ತಿಳಿದು ಬಹಳ ಸಂತೋಷಪಟ್ಟೆ. ಇದರಲ್ಲಿ ಅನೇಕ ವಿಷಯಗಳನ್ನು ಬಿಟ್ಟಿದ್ದಾರೆ. ಅನೇಕ ಪ್ರದೇಶಗಳಿಗೆ ಈಗಿನ ಮಸೂದೆಯಿಂದ ತೊಂದರೆಯಾಗುತ್ತದೆ. ಇದರಲ್ಲಿ ಹೆಚ್ಚು ಮಳೆ ಬರುವ ಪ್ರದೇಶಗಳಲ್ಲಿ ಎಂದರೆ 50-60 ಅಂಗುಲಗಳಿಗಿಂತ ಹೆಚ್ಚು ಮಳೆ ಬರುವ ಪ್ರದೇಶಗಳಲ್ಲಿ ಮತ್ತು ಕಡಮೆ ಮಳೆ ಬೀಳುವ ಪ್ರದೇಶಗಳಲ್ಲಿ ಹೆಚ್ಚಿನ ಸೌಲಭ್ಯ ಕೊಡುವ ರೀತಿಯಲ್ಲಿ ಯಾವ ವಿಷಯವೂ ಅಡಕವಾಗಿಲ್ಲ.

ಈಗ ಕೋಲಾರ, ತುಮಕೂರು ಇಂಥ ಅನೇಕ ಪ್ರದೇಶಗಳಲ್ಲಿ ಮಳೆ ಬಹಳ ವಿರಳ. ಅದು ಅಲ್ಲಿಯ ಜನಗಳಿಗೆ ಅಪರೂಪವಾದ ವಸ್ತುವಾಗಿದೆ. ಅಂಥ ಪ್ರದೇಶಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು ಹೆಚ್ಚು ಸೌಕರ್ಯಗಳನ್ನು ಒದಗಿಸುವ ವಿಚಾರದಲ್ಲಿ ಇದರಲ್ಲಿ ಏನನ್ನೂ ಅಳವಡಿಸಿಲ್ಲ. ಆ ಬಗ್ಗೆ ನಾನು ಕೆಲವು ವಿಷಯಗಳನ್ನು ಮಾನ್ಯ ಮಂತ್ರಿಗಳಲ್ಲಿ ತಿಳಿಸುತ್ತ ಸೆಲೆಕ್ಟ್ ಕಮಿಟಿಯವರು ಕೂಡ ಇವುಗಳನ್ನೆಲ್ಲ ಪರಿಶೀಲನೆ ಮಾಡಬೇಕೆಂದು ನಾನು ಈ ಸಭೆಯ ಮೂಲಕ ಪ್ರಾರ್ಥನೆ ಮಾಡುತ್ತೇನೆ.

ಕೋಲಾರ ಜಿಲ್ಲೆ ಬಹಳ ಪ್ರಸಿದ್ಧವಾದ ಸ್ಥಳ. ಅಲ್ಲಿ ಬಂಗಾರ ಸಿಕ್ಕುತ್ತದೆ. ಆದ್ದರಿಂದ ಜನಗಳೆಲ್ಲ ಸಮೃದ್ಧರಾಗಿರುತ್ತಾರೆ ಎನ್ನುವ ಭಾವನೆ ಅನೇಕರಲ್ಲಿದೆ. ನನ್ನ ಅಭಿಪ್ರಾಯದಲ್ಲಿ ಹೇಳಬೇಕಾದರೆ, ಅಲ್ಲಿಯ ಸಮೃದ್ಧಿಯಲ್ಲ ಕೆರೆಗಳಲ್ಲಿದೆ ಎಂದು ತಿಳಿಸುತ್ತೇನೆ. ಆ ಕೆರೆಗಳೆಲ್ಲ ನೂರಾರು ವರ್ಷಗಳ ಹಿಂದೆ ಕಟ್ಟಿದಂಥ ಕೆರೆಗಳು. ಇವತ್ತು ಹಿಂದೆ ಕಟ್ಟಿದಂಥ ಕೆರೆಗಳೆಲ್ಲ ಹೂತು ಹೋಗುತ್ತಿವೆ. ಹಿಂದೆ ಇದ್ದ ಕೈಪಾಸಿಟಿಯಲ್ಲಿ ಕೆಲವು ಅರ್ಧವಾಗಿವೆ, ಕೆಲವು ಕಾಲುಭಾಗ ಕೈಪಾಸಿಟಿಗೆ ಇಳಿದಿವೆ. ಇಂಥ ಕೆರೆಗಳ ಕೈಪಾಸಿಟಿಯನ್ನು ಉತ್ತಮ ಪಡಿಸುವುದಕ್ಕೆ ಈ ಮಸೂದೆಯಲ್ಲಿ ಏನೂ ಅಡಕ ಮಾಡಿಲ್ಲ. ಮಾನ್ಯ ಮಂತ್ರಿಗಳು ಒಮ್ಮೆ ಮಾತನಾಡುವಾಗ ಒಂದು ಕೆರೆಯನ್ನು ಜೀರ್ಣೋದ್ಧಾರ ಮಾಡಬೇಕಾದರೆ, ಹಿಂದೆ ಇದ್ದ ಕೈಪಾಸಿಟಿಗೆ ತರಬೇಕಾದರೆ ವಿಶೇಷ ಹಣ ಬೇಕಾಗುತ್ತದೆ, ಅದಕ್ಕೆ ಹಣವಿಲ್ಲ, ಅದನ್ನು ಮಾಡುವುದು ಬಹಳ ಕಷ್ಟ ಎಂದು ಹೇಳುತ್ತಿದ್ದರು. ಕೆರೆಗಳು ಹೂತು ಹೋಗುವುದಕ್ಕೆ ಅನೇಕ ಕಾರಣಗಳಿವೆ. ನಾನು ನಮ್ಮ ತಾಲ್ಲೂಕಿನಲ್ಲಿ ನೋಡಿರುವಂತೆ ಕ್ಯಾಚ್‌ಮೆಂಟ್ ಏರಿಯಾವನ್ನೆಲ್ಲ ಉಳುಮೆ ಮಾಡಿರುತ್ತಾರೆ. ಅದನ್ನು ತಡೆಯುವುದಕ್ಕೆ ಶಕ್ತಿ ಇಲ್ಲದೆ ಕೆರೆಗಳು ಹೂತು ಹೋಗುತ್ತವೆ. ನೂರು ಎಕರೆಗೆ ಆಗುವಷ್ಟು ನೀರು ನಿಲ್ಲುತ್ತಿದ್ದ ಕೆರೆಯಲ್ಲಿ ಈಗ 50 ಎಕರೆ, 20 ಎಕರೆಗೆ ಆಗುವಷ್ಟು ಮಾತ್ರ ನೀರು ನಿಲ್ಲುವ ಸ್ಥಿತಿಗೆ ಇಳಿದಿದೆ. ಈ ರೀತಿ ಆಗುವುದನ್ನು ತಡೆಗಟ್ಟಲು ಇದರಲ್ಲಿ ಏನೂ ಅವಕಾಶವಿಲ್ಲ. ಸರ್ಕಾರದವರು ಉಗ್ರವಾದ ಕ್ರಮ ತೆಗೆದುಕೊಂಡು ಆ ರೀತಿ ಉಳುಮೆ ಮಾಡಿರುವವರನ್ನೆಲ್ಲ ಎವಿಕ್ಟ್ ಮಾಡಿ ಓಡಿಸಬೇಕು. ಅದಕ್ಕೆ ಈ ಮಸೂದೆಯಲ್ಲಿ ಅವಕಾಶ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ.

ಕಾಂಟೂರ್ ಬಂಡ್ಸ್ ಹಾಕುವುದು, ಮರಗಳನ್ನು ಬೆಳಸುವುದು, ಇಂಥದಕ್ಕೆ ಅವಕಾಶ ಮಾಡಿ ಕೊಡಬೇಕು ಮತ್ತು ಅಚ್ಚುಕಟ್ಟನ್ನು ಕಡಮೆಯಾಗುವಂತೆ ಮಾಡುವಂಥ ಯಾವ ಕಾರ್ಯಗಳನ್ನೂ ಮಾಡಬಾರದು ಮತ್ತು ಕೆರೆಯ ಮೇಲ್ಭಾಗದಲ್ಲಿ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಯಾರಿಗೂ ಉಳುವುದಕ್ಕೆ ಅವಕಾಶ ಕೊಡಬಾರದು. ಈ ವಿಷಯಗಳನ್ನು ಇದರಲ್ಲಿ ಸೇರಿಸಿದರೆ ಉತ್ತಮ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಕಾಲುವೆಯನ್ನು ತೆಗೆಯಲು ಭೂಮಿಯನ್ನು ಅಕ್ವೈರ್ ಮಾಡುವುದರಲ್ಲಿ ಬಹಳ ವಿಳಂಬವಾಗುತ್ತಿದೆ. ನಮ್ಮ ತಾಲ್ಲೂಕಿನ ದೊಡ್ಡಮಲ್ಲೇಕೆರೆಗೆ ಮೂರು ಮೈಲ ದೂರ ಫೀಡರ್ ನಾಲೆಯನ್ನು ಮಾಡಿದ್ದಾರೆ. ಸಹಸ್ರಾರು ರೂಪಾಯಿ ಖರ್ಚು ಮಾಡಿ ಈ ನಾಲೆಯನ್ನು ತೆಗೆಸಿದ್ದಾರೆ. ಒಂದೇ